ಕಾಲೇಜು ಶಿಕ್ಷಣ ಇಲಾಖೆ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ-573116

# "ಮೈಸೂರುವಿಶ್ವವಿದ್ಯಾನಿಲಯದಅಂತಿಮಬಿ. ಎ [E. P] ಪದವಿಯಇಂಟರ್ಶಿಪ್ ಭಾಗವಾಗಿರಾಜ್ಯಶಾಸ್ತ್ರವಿಭಾಗಕ್ಕೆಸಲ್ಲಿಸಲಾದ ಕಿರುಸಂಶೋಧನಾ ಪ್ರಬಂಧ"



ವಿದ್ಯಾರ್ಥಿಯಹೆಸರು:-**ಕುಶಾಲ್ ಎಮ್**

ತರಗತಿ:-ಅಂತಿಮಬಿ.ಎ[E.P]

ನೊಂದಣಿಸಂಖ್ಯೆ:-U01GF21A0013

ಸಂಶೋಧನಾವಿಷಯ:ನುಗ್ಗೆಹಳ್ಳಿಗ್ರಾಮಪಂಚಾಯಿತಿ

ಮಾರ್ಗದರ್ಶಕರು :- ಡಾ.ನಾಗರಾಜ ಎನ್. ಟಿ.ಮುಖ್ಯಸ್ಥರು,ರಾಜ್ಯಶಾಸ್ತ್ರವಿಭಾಗ

ಶೈಕ್ಷಣಿಕವರ್ಷ 2023- 24

ಕಾಲೇಜು ಶಿಕ್ಷಣ ಇಲಾಖೆ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ-573116

# ರಾಜ್ಯಶಾಸ್ತ್ರ ವಿಭಾಗ

"ಮೈಸೂರು ವಿಶ್ವವಿದ್ಯಾಲಯದ ಅಂತಿಮ ಬಿ.ಎ ಪದವಿಯ ಇಂಟರ್ನ್‌ಶಿಪ್ ಭಾಗವಾಗಿ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಭಾಗಕ್ಕೆ ಸಲ್ಲಿಸಲಾದ ಕಿರು ಸಂಶೋಧನಾ ಪ್ರಬಂಧ"

| | |
|---|---|
| ವಿದ್ಯಾರ್ಥಿಯ ಹೆಸರು | ಕುಶಾಲ್ ಎಮ್ |
| ತರಗತಿ/ ಸೆಕ್ಷನ್/ ಕಾಂಬಿನೇಷನ್ | ಅಂತಿಮ ಬಿ.ಎ<br>(ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ) |
| ನೊಂದಣಿ ಸಂಖ್ಯೆ/ ರಿಜಿಸ್ಟರ್ ನಂಬರ್ | U01GF21A0013 |
| ಸಲ್ಲಿಸಿದ ದಿನಾಂಕ | 23-05-2024 |

ಇವರಿಗೆ ಸಲ್ಲಿಕೆ

ಡಾ. ನಾಗರಾಜ ಎನ್. ಟಿ.

ಮುಖ್ಯಸ್ಥರು

ರಾಜ್ಯಶಾಸ್ತ್ರ ವಿಭಾಗ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು

ಚನ್ನರಾಯಪಟ್ಟಣ-573116

ಶೈಕ್ಷಣಿಕ ವರ್ಷ 2023-24

ಕಾಲೇಜು ಶಿಕ್ಷಣ ಇಲಾಖೆ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ-573116

# ರಾಜ್ಯಶಾಸ್ತ್ರ ವಿಭಾಗ

## ಸಂಶೋಧಕ ವಿದ್ಯಾರ್ಥಿಯ ಪ್ರಮಾಣ ಪತ್ರ

ಕುಮಾರ ಕುಶಾಲ್ ಎಮ್ ಅಂತಿಮ ಬಿ. ಎ. ತರಗತಿ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರ ವಿಭಾಗ,ರಿಜಿಸ್ಟರ್ ನಂಬರ್ U01GF21A0013 ಇವರು "ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ 2023- 24ನೇ ಸಾಲಿನ 6ನೇ ಸೆಮಿಸ್ಟರ್ ಗೆ ಈ ಇಂಟರಶಿಪ್ ಸಂಶೋಧನಾ ಕಿರು ಪ್ರಬಂಧವನ್ನು ಸಿದ್ಧಪಡಿಸಿದ್ದು, ಪ್ರಸ್ತುತ ಈ ಸಂಶೋಧನಾ ಕಿರು ಪ್ರಬಂಧವು ಮೂಲವಾಗಿದ್ದು ಈ ಮೊದಲು ಭಾಗಶಃವಾಗಲಿ ಅಥವಾ ಪೂರ್ಣವಾಗಲಿ ಯಾವ ವಿಶ್ವವಿದ್ಯಾಲಯ ಆಗಲಿ ಇನ್ಯಾವುದೇ ಸಂಸ್ಥೆಗಾಗಲಿ, ಯಾವುದೇ ಪದವಿ/ ಡಿಪ್ಲೋಮೋ ಅಥವಾ ಯಾವುದೇ ಪ್ರಶಸ್ತಿಗಾಗಲಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

Kushal.M

ವಿದ್ಯಾರ್ಥಿಯ ಸಹಿ

ದಿನಾಂಕ : 23-05-2024

ಸ್ಥಳ: ಶ್ರೀ. ಆ.ಪ್ರ.ದ. ಕಾಲೇಜು, ಚನ್ನರಾಯಪಟ್ಟಣ.

(

)

ಕಾಲೇಜು ಶಿಕ್ಷಣ ಇಲಾಖೆ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ-573116

# ರಾಜ್ಯಶಾಸ್ತ್ರ ವಿಭಾಗ

## ವಿಭಾಗದ ಮುಖ್ಯಸ್ಥರು/ಅಧ್ಯಾಪಕ ಮಾರ್ಗದರ್ಶಿ ಅವರ ಧೃಡೀಕರಣ ಪತ್ರ

**ಕುಮಾರ ಕುಶಾಲ್ ಎಮ್** ಅಂತಿಮ ಬಿ. ಎ. ತರಗತಿ,ರಾಜ್ಯಶಾಸ್ತ್ರ ವಿಭಾಗ, ರಿಜಿಸ್ಟರ್ ನಂಬರ್ **U01GF21A0013.** "ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ **2023-2024**ನೇ ಸಾಲಿನ **6**ನೇ ಸಮಿಸ್ಟರ್‌ಗೆ ಈ ಸಂಶೋಧನಾ ಕಿರು ಪ್ರಬಂಧವನ್ನು ಈ ವಿದ್ಯಾರ್ಥಿಯು ಇಂಟರ್ನ್‌ಶಿಪ್ ಸಂಶೋಧಕರಾಗಿ ರಾಜ್ಯಶಾಸ್ತ್ರ ವಿಭಾಗ, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ, ಇಲ್ಲಿಗೆ ಮೈಸೂರು ವಿಶ್ವ ವಿದ್ಯಾನಿಲಯದ ಅಂತಿಮ ಬಿ.ಎ ಪದವಿಯ ಆರನೇಯ ಸೆಮಿಸ್ಟರ್ ಇಂಟರ್ನ್‌ಶಿಪ್ ಸಂಶೋಧನೆಯ ಭಾಗವಾಗಿ ಡಾ. ನಾಗರಾಜ ಏನ್. ಟಿ. ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ,ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಈ ಸಂಶೋಧನಾ ಕಿರು ಪ್ರಬಂಧವು ಮೂಲವಾಗಿದ್ದು ಈ ಮೊದಲು ಭಾಗಶಃವಾಗಲಿ ಅಥವಾ ಪೂರ್ಣವಾಗಲಿ ಯಾವ ವಿಶ್ವವಿದ್ಯಾಲಯಕ್ಕಾಗಲೀ, ಇನ್ಯಾವುದೇ ಸಂಸ್ಥೆಗಾಗಲಿ, ಯಾವುದೇ ಪದವಿ/ಡಿಪ್ಲೊಮೊ ಅಥವಾ ಯಾವುದೇ ಪ್ರಶಸ್ತಿಗಾಗಲೀ ಸಲ್ಲಿಸಿರುವುದಿಲ್ಲವೆಂದು ಧೃಡಿಕರಿಸುತ್ತೇನೆ.

**ದಿನಾಂಕ : 23-05-2024**

ಸ್ಥಳ: C.R.P

ವಿಭಾಗದ ಮುಖ್ಯಸ್ಥರು

HOD Department of Political Science S.A.F.G. College Chennarayapatna

ಚನ್ನರಾಯಪಟ್ಟಣ

ಕಾಲೇಜು ಶಿಕ್ಷಣ ಇಲಾಖೆ

ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ-573116

# ರಾಜ್ಯಶಾಸ್ತ್ರ ವಿಭಾಗ

## ಪ್ರಾಂಶುಪಾಲರ ಧೃಡೀಕರಣ.

ಕುಮಾರ ಕುಶಾಲ್ ಎಮ್ ಅಂತಿಮ ಬಿ. ಎ. ತರಗತಿ,ರಾಜ್ಯಶಾಸ್ತ್ರ ವಿಭಾಗ, ರಿಜಿಸ್ಟರ್ ನಂಬರ್ U01GF21A0013. "ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ 2023-2024ನೇ ಸಾಲಿನ 6ನೇ ಸಮಿಸ್ಟರ್‌ಗೆ ಈ ಸಂಶೋಧನಾ ಕಿರು ಪ್ರಬಂಧವನ್ನು ಈ ವಿದ್ಯಾರ್ಥಿಯು ಇಂಟರ್ನ್‌ಶಿಪ್ ಸಂಶೋಧಕರಾಗಿ ರಾಜ್ಯಶಾಸ್ತ್ರ ವಿಭಾಗ, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ, ಇಲ್ಲಿಗೆ ಮೈಸೂರು ವಿಶ್ವ ವಿದ್ಯಾನಿಲಯದ ಅಂತಿಮ ಬಿ.ಎ ಪದವಿಯ ಆರನೇಯ ಸೆಮಿಸ್ಟರ್ ಇಂಟರ್ನ್‌ಶಿಪ್ ಸಂಶೋಧನೆಯ ಭಾಗವಾಗಿ ಡಾ. ನಾಗರಾಜ ಏನ್. ಟಿ. ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ,ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಈ ಸಂಶೋಧನಾ ಕಿರು ಪ್ರಬಂಧವು ಮೂಲವಾಗಿದ್ದು ಈ ಮೊದಲು ಭಾಗಶಃವಾಗಲಿ ಅಥವಾ ಪೂರ್ಣವಾಗಲಿ ಯಾವ ವಿಶ್ವವಿದ್ಯಾಲಯಕ್ಕಾಗಲೀ, ಇನ್ಯಾವುದೇ ಸಂಸ್ಥೆಗಾಗಲಿ, ಯಾವುದೇ ಪದವಿ/ಡಿಪ್ಲೊಮೊ ಅಥವಾ ಯಾವುದೇ ಪ್ರಶಸ್ತಿಗಾಗಲೀ ಸಲ್ಲಿಸಿರುವುದಿಲ್ಲವೆಂದು ಧೃಡಿಕರಿಸುತ್ತೇನೆ.

ದಿನಾಂಕ : 23-05-2024

ಸ್ಥಳ: ಚನ್ನರಾಯಪಟ್ಟಣ

Manjunatha M.K

ಪ್ರಾಂಶುಪಾಲರು

ಪ್ರಾಂಶುಪಾಲರು
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ–573 116

# ಪರಿವಿಡಿ


ಅಧ್ಯಾಯ-1. ಪೀಠಿಕೆ

1.1. ಪೀಠಿಕೆ

1.2. ಕಿರು ಸಂಶೋಧನೆಯ ಪರಿಕಲ್ಪನೆ

1.3. ಕಿರು ಸಂಶೋಧನೆಯ ಮಹತ್ವ

1.4. ಕಿರು ಸಂಶೋಧನೆಯ ಉದ್ದೇಶ

1.5. ಕಿರು ಸಂಶೋಧನೆಯ ಲಕ್ಷಣಗಳು

1.6. ಸಾಹಿತ್ಯ ಅಧ್ಯಯನ

ಅಧ್ಯಾಯ-2. ಭಾರತದಲ್ಲಿ ಸ್ಥಳೀಯ ಸರ್ಕಾರದ ಐತಿಹಾಸಿಕ ಹಿನ್ನಲೆ

2.1 ಸಂವಿಧಾನಾತ್ಮಕ ಸ್ಥಾನಮಾನ

a)73 ನೇ ಸಂವಿಧಾನ ತಿದ್ದುಪಡಿಯ ಅಂಶಗಳು

b) 74 ನೇ ಸಂವಿಧಾನ ತಿದ್ದುಪಡಿಯ ಅಂಶಗಳು

2.2. ಗ್ರಾಮ ಪಂಚಾಯಿತಿಯ ರಚನೆ ಮತ್ತು ಕಾರ್ಯಗಳು

2.3. ಪಂಚಾಯತ್ ರಾಜ್ ವ್ಯವಸ್ಥೆಯ ಅನುಕೂಲ ಮತ್ತು ಅನಾನುಕೂಲಗಳು

ಅಧ್ಯಾಯ-3. ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿ

3.1.ಪೀಠಿಕೆ

3.2.ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿ ಹಿನ್ನಲೆ

3.3..ನುಗ್ಗೆಹಳ್ಳಿ ಗ್ರಾಮ ಪಂಚಾಯಿತಿ ವಿವರ

ಅಧ್ಯಾಯ-4. ಉಪಸಂಹಾರ

# ಅಧ್ಯಾಯ-1. ಪೀಠಿಕೆ

## 1.1 ಪೀಠಿಕೆ

ಭಾರತವು ಹಳ್ಳಿಗಳಿಂದ ಕೂಡಿದ ರಾಷ್ಟ್ರವಾಗಿದೆ. ಬಹುತೇಕ ಜನರು ಹಳ್ಳಿಗಳಲ್ಲಿಯೇ .ಜೀವನ ನಡೆಸುತ್ತಿದ್ದಾರೆ. ಈ ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಜನರ ಜೀವನ ಉದ್ಧಾರವಾಗಲು ಹಳ್ಳಿಗಳ ಅಭಿವೃದ್ಧಿಯತ್ತ ಸರ್ಕಾರ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ಹಾಗೆಯೇ ಗ್ರಾಮೀಣ ಜನರು ಗ್ರಾಮದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ವಿಕೇಂದ್ರೀಕೃತ ವ್ಯವಸ್ಥೆ ಯಶಸ್ವಿಯಾಗಲು ಸಾಧ್ಯವಾಗುತ್ತದೆ.

ಗ್ರಾಮ ಪಂಚಾಯತಿಯು ಒಂದು ಸ್ಥಳೀಯ ಪ್ರದೇಶದ ಸರ್ಕಾರವಾಗಿರುತ್ತದೆ. ಅದು ಸ್ಥಳೀಯ ಜನರಿಗೆ ರಾಜಕೀಯ ಅಧಿಕಾರಗಳನ್ನು ವಿಕೇಂದ್ರೀಕರಣ ಗೊಳಿಸುವುದನ್ನು ಒಳಗೊಂಡಿದೆ. ಸ್ಥಳೀಯ ಪ್ರದೇಶದ ಜನರೇ ತಮ್ಮ ವ್ಯವಹಾರಗಳ ಕಾರ್ಯನಿರ್ವಹಣೆಯನ್ನು ಮಾಡುತ್ತಾರೆ. ಒಂದು ರಾಷ್ಟ್ರದ ಅಥವಾ ರಾಜ್ಯದ ಸರ್ಕಾರ ತಾನೇ ನಿಭಾಯಿಸಲೆಂದು ವಹಿಸಿಕೊಂಡಿರುವ ಶುದ್ಧ ಹಾಗೂ ಆರೋಗ್ಯಕರ ನೀರು ಸರಬರಾಜು, ನೈರ್ಮಲ್ಯ, ಆರೋಗ್ಯ ಇವೆ ಮೊದಲಾದ ವಿಷಯಗಳು ಮೂಲತಃ ವಿವಿಧ ಸ್ಥಳೀಯ ಪ್ರದೇಶಗಳಲ್ಲಿ ವಾಸವಾಗಿರುವ ಜನರ ಸಮಸ್ಯೆಗಳೇ ಆಗಿವೆ. ಹೀಗೆ ಈ ಸಮಸ್ಯೆಗಳನ್ನು ಜನರು ತಾವೇ ತಮ್ಮ ದೈನಂದಿನ ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳಾಗಿರುವುದರಿಂದ ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವುದರಲ್ಲೂ ಅವರು ಹೆಚ್ಚು ಅರ್ಹರಾಗುತ್ತಾರೆ. ಈ ಜವಾಬ್ದಾರಿಗಳನ್ನು ಸ್ಥಳೀಯವಾಗಿ ಚುನಾಯಿತಗೊಂಡ ಪ್ರತಿನಿಧಿಗಳಿಗೆ ವರ್ಗಾಯಿಸುವುದರಿಂದ ಜನರಿಗೆ ಉತ್ತಮ ಸಹಭಾಗಿತ್ವ ಮತ್ತು ಅವರ ಸಮಸ್ಯೆಗಳಿಗೆ ಉತ್ತಮ ಪರಿಹಾರವನ್ನು ಕಂಡುಕೊಳ್ಳುವ ಅವಕಾಶವನ್ನು ಗ್ರಾಮ ಪಂಚಾಯತಿಯು ಕಲ್ಪಿಸಿ ಕೊಟ್ಟಂತಾಗುತ್ತದೆ

ಆಧುನಿಕ ರಾಜ್ಯಗಳು ಬಹಳ ವಿಶಾಲವಾಗಿರುವುದರಿಂದ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಆಡಳಿತವನ್ನು ಪರಿಣಾಮಕಾರಿಯಾಗಿ ನಡೆಸುವುದು ಕಷ್ಟ ಸಾಧ್ಯ. ಜೊತೆಗೆ ಆಧುನಿಕ ರಾಜ್ಯಗಳು ಇಂದು ಪೊಲೀಸ್ ರಾಜ್ಯವಾಗಿರದೆ ಕಲ್ಯಾಣ ರಾಜ್ಯಗಳಾಗಿ ಪರಿವರ್ತನೆಗೊಂಡಿವೆ. ಆದುದರಿಂದ ಸರ್ಕಾರಗಳು ಜನತೆಯ ಕಲ್ಯಾಣಕ್ಕಾಗಿ ಅಸಂಖ್ಯಾತ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಹೀಗಾಗಿ ಈ ಕಾರ್ಯಗಳನ್ನೆಲ್ಲ ಕೇವಲ ಕೇಂದ್ರ ಸರ್ಕಾರ

ಅಥವಾ ರಾಜ್ಯ ಸರ್ಕಾರದಿಂದ ನಿರ್ವಹಿಸಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಭಾರವನ್ನು ಕಡಿಮೆ ಮಾಡಲು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ.

## 1.2. ಕಿರು ಸಂಶೋಧನೆಯ ಪರಿಕಲ್ಪನೆ

ಗ್ರಾಮ ಪಂಚಾಯತಿಯು ಗ್ರಾಮಗಳ ಸುವ್ಯವಸ್ಥೆಯನ್ನು ನಿರ್ವಹಿಸುವ ಪ್ರಜಾಸತ್ತಾತ್ಮಕ ಸಂಸ್ಥೆ. ಭಾರತ, ಚೀನ ಮುಂತಾದ ಪೌರಸ್ತ್ಯ ದೇಶಗಳಲ್ಲಿ ನೂರಕ್ಕೆ ಎಂಬತ್ತು ಜನ ಗ್ರಾಮಗಳಲ್ಲಿ ವಾಸಿಸುತ್ತಾರೆ. ಮನುಷ್ಯ ವನ್ಯಜೀವನದಿಂದ ಬೇರೆಯಾಗಿ ಸಂಘಜೀವಿಯಾಗಿ ಬಾಳಲು ಪ್ರಾರಂಭಿಸಿದ ಕಾಲದಲ್ಲಿ ಉದಯಿಸಿದ ಸಾಮಾಜಿಕ ಸಂಘಟನೆಯ ಪ್ರಥಮ ಘಟಕಗಳಾದ ಗ್ರಾಮಗಳು ಸಂಪರ್ಕಾನುಕೂಲವಿಲ್ಲದ ಕಾಲದಲ್ಲಿ ಸ್ವಾವಲಂಬನ ಅಗತ್ಯವೂ ಅನಿವಾರ್ಯವೂ ಆಗಿ ಈ ಗ್ರಾಮಘಟಕಗಳು ಸ್ವತಂತ್ರವಾಗಿ ಬೆಳೆದು ಬಂದುವು.

ಸಾಮಾನ್ಯವಾಗಿ 5,000 ಜನಸಂಖ್ಯೆಯುಳ್ಳ ಗ್ರಾಮ ಅಥವಾ ಗ್ರಾಮಗಳಿಗೆ ಒಂದು ಗ್ರಾಮ ಪಂಚಾಯತಿಯ ನಿರ್ಮಾಣವಾಗುತ್ತದೆ. ಇದಕ್ಕೂ ಹೆಚ್ಚಿನ ಜನಸಂಖ್ಯೆಯಿರುವ ಊರುಗಳಿಗೆ ನಗರ ಪಂಚಾಯತಿಯನ್ನು ರಚಿಸುತ್ತಾರೆ. ಪ್ರಾಚೀನ ಕಾಲದಿಂದಲೂ ಗ್ರಾಮಸಭೆ ಶಾಸನ ವ್ಯವಸ್ಥೆಯಲ್ಲಿ ಬಹಳ ಮಹತ್ತ್ವವುಂಟು. ಪ್ರಬುದ್ಧರಾದ ಸದ್ಗಹಸ್ಥರೆಲ್ಲ ಗ್ರಾಮಸಭೆಯ ಸದಸ್ಯರಾಗಿರುತ್ತಿದ್ದರು. ಈ ಸಭೆಯ ಪ್ರಮುಖನಿಗೆ ಗ್ರಾಮಣಿ ಎಂಬ ಹೆಸರಿರುತ್ತಿತ್ತು. ಗ್ರಾಮಸಭೆಯಿಂದ ಆರಿಸಲ್ಪಟ್ಟ ಚಿಕ್ಕದೊಂದು ಕಾರ್ಯಕಾರಿ ಸಮಿತಿ ಗ್ರಾಮದ ಕಾರ್ಯಭಾರವನ್ನೆಲ್ಲ ನಡೆಸುತ್ತಿತ್ತು. ಈ ಸಮಿತಿಯಲ್ಲಿ ಸಾಮಾನ್ಯವಾಗಿ ಐದು ಜನ ಸದಸ್ಯರಿರುತ್ತಿದ್ದ ಕಾರಣ ಇದಕ್ಕೆ ಪಂಚಾಯತಿ ಎಂಬ ಹೆಸರು ಬಂದಿದೆ. ಪ್ರತಿಯೊಂದು ಗ್ರಾಮಕ್ಕೆ ಪ್ರತ್ಯೇಕವಾದ ಗ್ರಾಮಸಭೆ ಮತ್ತು ಗ್ರಾಮ ಪಂಚಾಯತಿ ಇರುತ್ತಿದ್ದವು. ಇದೊಂದು ಸ್ವಯಂಪೂರ್ಣವಾದ ಶಾಸನ ವ್ಯವಸ್ಥೆಯಾಗಿತ್ತು. ವೇದಕಾಲದ ಸ್ವತಂತ್ರ, ಸ್ವಾಯತ್ತ ಗ್ರಾಮಸಂಸ್ಥೆಗಳು ಕರಗಿಹೋಗಿ ಸಾಮ್ರಾಜ್ಯಗಳು ಉದಿಸಿ ಮತ್ತೆ ಅವೂ ಜನಪ್ರಿಯತೆಯನ್ನು ಕಳೆದುಕೊಂಡು ಚಿಕ್ಕ ಚಿಕ್ಕ ಗಣರಾಜ್ಯಗಳು ಮತ್ತೆ ಪ್ರಜಾಸತ್ತಾತ್ಮಕ ಪದ್ಧತಿಯ ಮೇಲೆ ರೂಪುಗೊಂಡು ಗ್ರಾಮ ಗಣರಾಜ್ಯಗಳಾಗಿ ಬೆಳೆದುದನ್ನು ಭಾರತದ ಇತಿಹಾಸದಲ್ಲಿ ಬುದ್ಧನ ಕಾಲದ ಹೊತ್ತಿಗೆ ಕಾಣಬಹುದು. ಆಡಳಿತ ಸುಧಾರಣೆಯ ಮಾತು ಬಂದಾಗಲೆಲ್ಲ ಭಾರತದ ಮುಖಂಡರು ಗಾಂಧೀಜಿ ಹೇಳುತ್ತಿದ್ದ ಗ್ರಾಮರಾಜ್ಯ ರಾಮರಾಜ್ಯಗಳ ಬಗ್ಗೆ ಯೋಚಿಸುತ್ತಿದ್ದರು.

ಭಾರತದಂಥ ಗ್ರಾಮಪ್ರಧಾನ ದೇಶಗಳಲ್ಲಿ ಅಧಿಕಾರ, ಯೋಜನೆ, ಅಭಿವೃದ್ಧಿಗಳು ಗ್ರಾಮದಿಂದ ರಾಜಧಾನಿಯತ್ತ ಹರಿಯುವುದು ಅಗತ್ಯವೆಂಬುದನ್ನು ಮನಗಂಡರು. ಈ ಬಗ್ಗೆ ಪರ್ಯಾಲೋಚಿಸಲು ಅನೇಕ ಸಮ್ಮೇಳನ ಸಮಿತಿಗಳು ರಚಿತವಾದವು. ಅವುಗಳಲ್ಲಿ ಪ್ರಸಿದ್ಧವಾದ ಬಲವಂತರಾಯ್ ಮೆಹತಾ ಕಮಿಟಿಯ ವರದಿ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣ ಸಿದ್ಧಾಂತವನ್ನು ಪ್ರತಿಪಾದಿಸಿ ಪ್ರಖ್ಯಾತವಾಗಿದೆ. ಗ್ರಾಮ ಪಂಚಾಯತಿಯೇ ರಾಷ್ಟ್ರದ ಸಂವಿಧಾನಾತ್ಮಕವಾದ ಪ್ರಾಥಮಿಕ ಘಟಕವೆಂದೂ ಅದಕ್ಕೆ ತಕ್ಕ ಸ್ವಾಯತ್ತತೆಯನ್ನು ಕೊಟ್ಟು ಭದ್ರಪಡಿಸಬೇಕೆಂದೂ ಆ ಸಮಿತಿ ಸೂಚಿಸಿದೆ. ಪಂಚಾಯತಿಗೆ ಕೆಲವು ಸ್ಥಾನಿಕ ತೆರಿಗೆಗಳನ್ನು - ಮನೆ, ಸ್ಥಳ, ಉದ್ಯೋಗ, ಮನೋರಂಜನೆ, ಜಾನುವಾರು, ಜಾತ್ರೆ, ವಾಹನ, ಸಂತೆ, ಅಂಗಡಿ ಮುಂತಾದವುಗಳ ಮೇಲೆ ವಿಧಿಸಿ, ವಸೂಲಿ ಮಾಡುವ ಅಧಿಕಾರವಿದೆ. ಮನೆಗಳನ್ನು ಕಟ್ಟಲು ಅಪ್ಪಣೆ ಕೊಡುವ, ನಿರಾಕರಿಸುವ, ಸ್ವತ್ತು ವರ್ಗಾವಣೆಯನ್ನು ಕ್ರಮಗೊಳಿಸುವ ಅಧಿಕಾರವಿದೆ. ರಸ್ತೆ, ದೀಪ, ನೈರ್ಮಲ್ಯ, ನೀರಿನ ವ್ಯವಸ್ಥೆ ಮುಂತಾದವುಗಳ ಸ್ಥಾಪನೆ, ನಿರ್ವಹಣೆಗಳು ಕಡ್ಡಾಯವಾದ ಕರ್ತವ್ಯಗಳು. ಆದಾಯ ಹೆಚ್ಚಿಸುವಂಥ ಕೆರೆ ಬಾವಿಗಳ ನಿರ್ಮಾಣ, ಅರಣ್ಯ ಬೆಳವಣಿಗೆ ಮೊದಲಾದ ಕಾರ್ಯಕ್ರಮಗಳನ್ನೂ ಶಿಕ್ಷಣ, ವಸತಿ, ವಾಚನಾಲಯ, ಕ್ರೀಡಾಂಗಣ, ತೋಟಗಳು ಮುಂತಾದ ಸೌಕರ್ಯಗಳನ್ನು ಒದಗಿಸುವಂಥ ಯೋಜನೆಗಳನ್ನೂ ಪಂಚಾಯತಿಗಳು ಕೈಗೊಳ್ಳಬಹುದು.

## 1.3. ಕಿರು ಸಂಶೋಧನೆಯ ಮಹತ್ವ

ಇಂದಿನ ಆಧುನಿಕ ಪ್ರಜಾಪ್ರಭುತ್ವ ಯುಗದಲ್ಲಿ ಸ್ಥಳೀಯ ಸರ್ಕಾರಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಆದ್ದರಿಂದಲೇ ಜೆ.ಜೆ ರುಸೋ ರವರು "ಒಂದು ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಯಶಸ್ವಿಯಾಗಬೇಕಾದರೆ ಅದು ಉತ್ತಮವಾದ ಸ್ಥಳೀಯ ಸರ್ಕಾರವನ್ನು ಹೊಂದಿರಬೇಕು" ಎಂದಿದ್ದಾರೆ. ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯಿತಿಯು ಸ್ಥಳೀಯ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸುವ ಮೂಲಕ ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಪ್ರಮುಖವಾದ ಪಾತ್ರ ವಹಿಸುತ್ತವೆ. ಅವುಗಳನ್ನು ಈ ಮುಂದಿನ ಅಂಶಗಳಲ್ಲಿ ತಿಳಿಯೋಣ

### 01. ಆಡಳಿತದಲ್ಲಿ ದಕ್ಷತೆಯನ್ನು ಹೊಂದಿರುತ್ತದೆ

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಅತಿಯಾದ ಕಾರ್ಯಭಾರವನ್ನು ನಿರ್ವಹಿಸುತ್ತಿವೆ. ಹೀಗಾಗಿ ಸ್ಥಳೀಯ ಪ್ರದೇಶಗಳ ಸಮಸ್ಯೆಗಳತ್ತ ಹೆಚ್ಚಿನ ಗಮನ ಹರಿಸಲು

ಸಾಧ್ಯವಾಗುತ್ತಿಲ್ಲ. ಆದ್ದರಿಂದಲೇ ಸ್ಥಳೀಯ ಸಮಸ್ಯೆಗಳನ್ನು ಸ್ಥಳೀಯ ಹಂತದಲ್ಲಿಯೇ ಗ್ರಾಮ ಪಂಚಾಯಿತಿಯು ಶೀಘ್ರವಾಗಿ ಬಗೆಹರಿಸುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರಾಜ್ಯದ ಆಡಳಿತದಲ್ಲಿ ಹೆಚ್ಚಿನ ಗಮನ ಹರಿಸಬಹುದಾಗಿದೆ. ಆಗ ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಕಾಣಬಹುದು ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜವಾಬ್ದಾರಿಯು ಕಡಿಮೆ ಆಗುತ್ತದೆ

**02. ಆಡಳಿತದಲ್ಲಿ ಆರ್ಥಿಕ ಮಿತವ್ಯಯ**

ಗ್ರಾಮ ಪಂಚಾಯಿತಿಯ ಪ್ರಾಮುಖ್ಯತೆ ಹೆಚ್ಚಾಗಲು ಅದರ ಆರ್ಥಿಕ ಮಿತವ್ಯಯವೂ ಸಹ ಕಾರಣವಾಗಿದೆ. ಸ್ಥಳೀಯ ಆಡಳಿತಕ್ಕೆ ಬೇಕಾದ ವೆಚ್ಚವನ್ನು ಗ್ರಾಮ ಪಂಚಾಯಿತಿಯೇ ಬರಿಸುವುದರಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆಡಳಿತದಲ್ಲಿ ಆರ್ಥಿಕ ಮಿತವ್ಯಯವನ್ನು ಸಾಧಿಸಬಹುದಾಗಿದೆ

**03. ನಾಗರಿಕ ಪ್ರಜ್ಞೆ ಮೂಡಿಸುತ್ತದೆ**

ಗ್ರಾಮ ಪಂಚಾಯಿತಿಯಿಂದ ಜನರಿಗೆ ರಾಜಕೀಯ ಪ್ರೇರಣೆ ಮೂಡಿಸುತ್ತದೆ. ಸ್ಥಳೀಯ ಮಟ್ಟದಲ್ಲಿ ಸ್ವಸಹಾಯಕ ಗುಣ, ಜವಾಬ್ದಾರಿ, ರಾಜಕೀಯ ಜಾಗೃತಿ ಮುಂತಾದ ಅಂಶಗಳನ್ನು ಬೆಳೆಸುತ್ತದೆ. ಜೊತೆಗೆ ಜನರಿಗೆ ಮೂಲಭೂತ ಕರ್ತವ್ಯಗಳನ್ನು ರಾಷ್ಟ್ರದ ಬಗೆಗಿನ ರಾಜಕೀಯ ಪ್ರಜ್ಞೆ ಹಾಗೂ ಇತರ ಆಗು ಹೋಗುಗಳನ್ನು ತಿಳಿಸಿ ನಾಗರಿಕ ಪ್ರಜ್ಞೆ ಮೂಡಿಸುತ್ತದೆ. ಆದ್ದರಿಂದಲೇ ಗ್ರಾಮಪಂಚಾಯಿತಿಯಂತಹ ಸ್ಥಳೀಯ ಸರ್ಕಾರಗಳನ್ನು "ರಾಜಕೀಯ ಶಿಕ್ಷಣ ಹಾಗೂ ತರಬೇತಿಯನ್ನು ನೀಡುವ ಪ್ರಾಥಮಿಕ ಶಾಲೆಗಳು" ಎಂದು ಕರೆಯಲಾಗುತ್ತದೆ.

**04. ಸ್ಥಳೀಯ ಸೇವೆಯನ್ನು ಜನರಿಗೆ ಒದಗಿಸುತ್ತದೆ**

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಹೆಚ್ಚಿನ ಕಾರ್ಯಭಾರದ ಜವಾಬ್ದಾರಿಯಿಂದ ಸ್ಥಳೀಯ ಸಮಸ್ಯೆಗಳ ಬಗೆಗೆ ಅರಿವಿನ ಕೊರತೆಯಾಗಿ ಸೂಕ್ತವಾದ ಪರಿಹಾರವನ್ನು ಸೂಚಿಸಲು ಸಾಧ್ಯವಾಗದೇ ಹೋಗಬಹುದು ಹೀಗಾಗಿ ಸ್ಥಳೀಯ ಸರ್ಕಾರಗಳು ಸ್ಥಳೀಯ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಒದಗಿಸುವುದರ ಮೂಲಕ ಸ್ಥಳೀಯ ಸೇವೆಗಳನ್ನು ಜನರಿಗೆ ಒದಗಿಸುತ್ತವೆ.

**05. ಅಧಿಕಾರ ವಿಕೇಂದ್ರೀಕರಣ**

ಗ್ರಾಮ ಪಂಚಾಯಿತಿಯು ಅಧಿಕಾರ ವಿಕೇಂದ್ರೀಕರಣದ ಆಧಾರದ ಮೇಲೆ ರಚನೆಯಾಗಿದ್ದು ಆಡಳಿತ ಸಂಸ್ಥೆಗಳು ಅತಿಯಾದ ಅಧಿಕಾರ ಕೇಂದ್ರೀಕರಣವನ್ನು ತಡೆಯುವ ಮೂಲಕ ಆಡಳಿತದಲ್ಲಿ ಭ್ರಷ್ಟಾಚಾರ, ಆದಕ್ಷತೆ, ವಿಳಂಬನೆ ಮುಂತಾದವುಗಳನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸುತ್ತವೆ.

**06. ಶೀಘ್ರ ಕಾರ್ಯಾಚರಣೆ**

ಜನರು ಆಡಳಿತದಲ್ಲಿ ಭಾಗವಹಿಸಲು ಅವಕಾಶವನ್ನು ನೀಡುವುದರ ಮೂಲಕ ಗ್ರಾಮ ಪಂಚಾಯಿತಿಯು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುತ್ತದೆ. ಪೂರಕವಾಗಿ ಸ್ಥಳೀಯ ಸರ್ಕಾರದ ಬೆಂಬಲ ಹಾಗೂ ಸಹಕಾರ ಇದ್ದಾಗ ಮಾತ್ರ ಪ್ರಜಾಪ್ರಭುತ್ವವು ರಾಷ್ಟ್ರಮಟ್ಟದಲ್ಲಿ ಆರೋಗ್ಯಕರ ಸ್ಥಿತಿಯಲ್ಲಿ ಕಾರ್ಯನಿರ್ವಹಿಸಲು ಸಾಧ್ಯವಾಗಿರುತ್ತದೆ.

**07. ಪ್ರಜಾಸತ್ತಾತ್ಮಕ ಮೌಲ್ಯ**

ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಕಾಲಾವಕಾಶ ಬೇಕಾಗುತ್ತದೆ. ಆದರೆ ಸ್ಥಳೀಯ ಸರ್ಕಾರಗಳು ನಿಮ್ಮ ಹತ್ತಿರ ಇರುವ ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸುವುದರ ಮೂಲಕ ತನ್ನ ಕಾರ್ಯಾಚರಣೆಯನ್ನು ನಡೆಸುತ್ತದೆ.

**08.ಜನತಾ ಕಲ್ಯಾಣ**

ಜನತೆಯ ಕಲ್ಯಾಣವನ್ನು ಸಾಧಿಸಲು ಗ್ರಾಮ ಪಂಚಾಯಿತಿಯು ಕಾರ್ಯೋನ್ಮುಖವಾಗುತ್ತದೆ ಇದರಿಂದ ಜನರಲ್ಲಿ ರಾಜಕೀಯ ಮತ್ತು ಸಾಮಾಜಿಕ ಹಿತಾಸಕ್ತಿಯನ್ನು ಮೂಡಿಸುತ್ತದೆ.

**09. ಸ್ವಯಂ ಸಹಾಯ ಹಾಗೂ ಸ್ವಾವಲಂಬಿಯಾಗಲು ಜನತೆಗೆ ಪ್ರೋತ್ಸಾಹ ನೀಡುತ್ತದೆ**

ಗ್ರಾಮ ಪಂಚಾಯಿತಿಯು ಸ್ವಾತಂತ್ರ ಮತ್ತು ಸಮಾನತೆಗೆ ಸೂಕ್ತ ತಳಹದಿಯನ್ನು ಒದಗಿಸಿ ಜನತೆ ತಮ್ಮ ಆಡಳಿತ ವ್ಯವಹಾರವನ್ನು ತಾವೇ ನೋಡಿಕೊಳ್ಳುವಂತೆ ಮಾಡುತ್ತದೆ. ಪರಸ್ಪರ ಸಹಕಾರ ಹಾಗೂ ಹೊಂದಾಣಿಕೆಯ ಮನೋಭಾವದಿಂದ ಜನತೆ ತಮ್ಮ ಸಮಸ್ಯೆಗಳನ್ನು

ಪರಿಹರಿಸುವ ಮೂಲಕ ಅವರಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯದ ಭಾವನೆ ಮೂಡುತ್ತದೆ. ಇದರಿಂದ ಜನತೆ ಸ್ವಸಹಾಯ ಹಾಗೂ ಸ್ವಾವಲಂಬಿಯಾಗಲು ಸಹಾಯವಾಗುತ್ತದೆ

**10. ಜನರಲ್ಲಿ ಸಾಮರಸ್ಯ ಮತ್ತು ಸುವ್ಯವಸ್ಥೆ ಮೂಡಿಸುತ್ತದೆ**

ಸ್ಥಳೀಯ ಸರ್ಕಾರಗಳು ಅಥವಾ ಗ್ರಾಮ ಪಂಚಾಯಿತಿಯು ಸರ್ಕಾರ ಮತ್ತು ಜನತೆಯ ನಡುವಿನ ಸಂದೇಹಗಳನ್ನು ಬಗೆಹರಿಸಿ ಸಾಮರಸ್ಯ ಮತ್ತು ಸುವ್ಯವಸ್ಥೆಯನ್ನು ಮೂಡಿಸುವ ಕಾರ್ಯವನ್ನು ಮಾಡುತ್ತದೆ.

ಹೀಗೆ ಗ್ರಾಮ ಪಂಚಾಯಿತಿಯು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಜನರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಬೆಳೆಸಲು ಸಾಧ್ಯವಾಗುತ್ತದೆ.

## 1.4 ಕಿರು ಸಂಶೋಧನೆಯ ಉದ್ದೇಶಗಳು

**ಗ್ರಾಮ ಪಂಚಾಯಿತಿಯು ಈ ಕೆಳಕಂಡ ಕಡ್ಡಾಯ ಉದ್ದೇಶ ಗಳನ್ನು ಹೊಂದಿದೆ.**

- ❖ ಗ್ರಾಮ ಪಂಚಾಯತ್ ಪ್ರದೇಶದ ಅಭಿವೃದ್ಧಿಗಾಗಿ ಯೋಜನೆಗಳನ್ನು ಸಿದ್ಧಪಡಿಸುವುದು.
- ❖ ರಸ್ತೆಗಳು, ಸೇತುವೆಗಳು, ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿಯ ಕಾರ್ಯಗಳು.
- ❖ ಗ್ರಾಮೀಣ ಗೃಹ ನಿರ್ಮಾಣ.
- ❖ ತನ್ನ ವ್ಯಾಪ್ತಿಯಲ್ಲಿನ ಬರುವ ಮಾರುಕಟ್ಟೆ, ಜಾತ್ರೆ, ಹಬ್ಬ ಹರಿದಿನಗಳು ಉತ್ಸವಗಳನ್ನು ನಿಯಂತ್ರಿಸುವುದು.
- ❖ ರಸ್ತೆಗಳಿಗೆ ಹೆಸರನ್ನು ನಾಮಕರಣ ಮಾಡುವುದು ಮತ್ತು ಮನೆಗಳಿಗೆ ಮನೆ ಸಂಖ್ಯೆ ನೀಡುವುದು. > ಬೀದಿ ದೀಪದ ವ್ಯವಸ್ಥೆ ಕಲ್ಪಿಸಿ ಕೊಡುವುದು.
- ❖ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು.
- ❖ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತೆ ವಹಿಸುವುದು.
- ❖ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ.
- ❖ ಗ್ರಂಥಾಲಯಗಳನ್ನು ಸ್ಥಾಪಿಸುವುದು.
- ❖ ಕುಡಿಯುವ ನೀರಿನ ಪೂರೈಕೆ ಮಾಡುವುದು.
- ❖ ಕೃಷಿ ಅಭಿವೃದ್ಧಿ ಹಾಗೂ ವಿಸ್ತರಣೆಗಾಗಿ ಪ್ರೋತ್ಸಾಹಿಸುವುದು.

❖ ಮೀನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು.

❖ ಸಾರ್ವಜನಿಕ ಉದ್ಯಾನವನಗಳು ಮತ್ತು ಆಟದ ಮೈದಾನಗಳ ನಿರ್ವಹಣೆ ಮಾಡುವುದು.

## 1.5 ಕಿರು ಸಂಶೋಧನೆಯ ಲಕ್ಷಣಗಳು

ಇಂದಿನ ಆಧುನಿಕ ಸರ್ಕಾರ ವ್ಯವಸ್ಥೆಯಲ್ಲಿ ಸ್ಥಳೀಯ ಸರ್ಕಾರಗಳು ಕಲ್ಯಾಣ ರಾಜ್ಯವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದ್ದು ಪ್ರಜಾಪ್ರಭುತ್ವದ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತದೆ. ಗ್ರಾಮ ಪಂಚಾಯಿತಿಯು ಜನತೆಯ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶದಿಂದ ರಚಿತವಾದ ಸಂಸ್ಥೆಯಾಗಿದೆ.

ಗ್ರಾಮ ಪಂಚಾಯಿತಿಯು ಹಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿದೆ ಅವುಗಳೆಂದರೆ,

➢ ಗ್ರಾಮ ಪಂಚಾಯಿತಿಯು ಸ್ಥಳೀಯ ಜನರಿಂದಲೇ ರಚಿತವಾದ ಸಂಸ್ಥೆಯಾಗಿದೆ. ಗ್ರಾಮ ಪಂಚಾಯಿತಿಗೆ ನಡೆಯುವ ಚುನಾವಣೆಯಲ್ಲಿ ಸ್ಥಳೀಯ ಜನತೆ ಸ್ಪರ್ಧಿಸಿ ಆಯ್ಕೆಯಾಗುವುದರಿಂದ ಸ್ಥಳೀಯ ಸರ್ಕಾರಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳೇ ಆಡಳಿತಗಾರರಾಗಿರುತ್ತಾರೆ.

➢ ಸಮಾಜದಲ್ಲಿನ ಎಲ್ಲಾ ಜಾತಿಯವರು ಹಾಗೂ ಸ್ತ್ರೀ ಪುರುಷರು ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿದ್ದು ಎಲ್ಲರಿಗೂ ಆಡಳಿತದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

➢ ಗ್ರಾಮ ಪಂಚಾಯಿತಿಯು ಪರಮಾಧಿಕಾರವನ್ನು ಹೊಂದಿರುವುದಿಲ್ಲ ಅದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಅಧಿಕಾರವನ್ನು ಹೆಚ್ಚು ಅಥವಾ ಕಡಿಮೆ ಮಾಡುವ ಅಧಿಕಾರವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೊಂದಿವೆ.

➢ ಗ್ರಾಮ ಪಂಚಾಯಿತಿ ಒಂದು ನಿರ್ದಿಷ್ಟ ಪ್ರದೇಶಕ್ಕೆ ಸಂಬಂಧಿಸಿದಂತೆ ಮಾತ್ರ ಕಾರ್ಯನಿರ್ವಹಿಸುತ್ತದೆ. ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಬರುವ ವಿಷಯಗಳ ಮೇಲೆ ಮಾತ್ರ ಅಧಿಕಾರವನ್ನು ಚಲಾಯಿಸುವ ಅಧಿಕಾರ ಹೊಂದಿದೆ.

➢ ಗ್ರಾಮ ಪಂಚಾಯಿತಿಯು ನಿರ್ದಿಷ್ಟ ಪ್ರದೇಶವನ್ನು ಆಳುವ ಅಧಿಕಾರವನ್ನು ಹೊಂದಿದ್ದು ಪ್ರಾದೇಶಿಕ ಸರ್ಕಾರವಾಗಿರುತ್ತದೆ.

➢ ಗ್ರಾಮ ಪಂಚಾಯಿತಿಯು ಕ್ರಿಯಾತ್ಮಕ ಸಂಸ್ಥೆಯಾಗಿದ್ದು ಜನರ ದಿನ ನಿತ್ಯದ ಜೀವನಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುತ್ತದೆ.

➢ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸಿ ಸ್ಥಳೀಯ ಹಿತಾಸಕ್ತಿಯನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಗ್ರಾಮ ಪಂಚಾಯಿತಿಯು ಹೊಂದಿದೆ ಜನರಿಗೆ ಅಗತ್ಯವಾದ ಮೂಲಭೂತ ಸೌಕರ್ಯವನ್ನು ಒದಗಿಸುತ್ತದೆ.

➢ ಗ್ರಾಮೀಣ ಜನರಲ್ಲಿ ನಾಯಕತ್ವದ ಗುಣಮಟ್ಟವು ಹೆಚ್ಚುತ್ತದೆ. ಇದು ಜನತೆಯು ತಮ್ಮನ್ನು ತಾವು ಆಳ್ವಿಕೆ ಮಾಡಿಕೊಳ್ಳುವಂತಹ ನಾಯಕತ್ವದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ.

➢ ಗ್ರಾಮೀಣ ಜನರು ತಮ್ಮ ಹಂತದಲ್ಲಿ ಅಭಿವೃದ್ಧಿ ಯೋಜನೆ ರಚಿಸಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರುವ ಅವಕಾಶವನ್ನು ಹೊಂದಿದೆ.

➢ ಗ್ರಾಮ ಪಂಚಾಯಿತಿ (ಸ್ಥಳೀಯ ಸಂಸ್ಥೆ) ಸಂವಿಧಾನಾತ್ಮಕವಾಗಿ ಆಡಳಿತ ನಡೆಸುವುದರಿಂದಾಗಿ ಸ್ಥಳೀಯ ಆಡಳಿತವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳನ್ನು ಮಾತ್ರ ನಂಬಿಕೊಳ್ಳುವ ಸ್ಥಿತಿಯು ಸಹ ಇಲ್ಲದಿರುವುದರಿಂದಾಗಿ ಸ್ಥಳೀಯ ಆಡಳಿತವು ಶಾಸನಬದ್ಧವಾಗಿರುತ್ತದೆ.

## 1.6. ಸಾಹಿತ್ಯ ಅಧ್ಯಯನ

01.ಭಾರತದಲ್ಲಿ ಸ್ಥಳೀಯ ಸರ್ಕಾರಗಳು-- ಟಿ. ದೀಪಕ್ ಕುಮಾರ್

ಪ್ರಕಾಶನ:ಮೈಸೂರು ಬುಕ್ ಹೌಸ್ (ಎಂ.ಬಿ.ಎಚ್) ನಂ, 471, ಸುಬ್ಬಯ್ಯ ರಸ್ತೆ, ಶ್ರೀ ಕೃಷ್ಣ ಬೇಕರಿ ಹತ್ತಿರ (ಮೈಸೂರು)

ಮುದ್ರಣ: TECH PRINTS #1057, Park view,ವಿಷ್ಣುವರ್ಧನ ರೋಡ್ ಚಾಮರಾಜಪುರಂ ಮೈಸೂರು-57005

02. ಕರ್ನಾಟಕದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು-- ಡಾ.ಗುರುಮೂರ್ತಿ ಉಬ್ಬೂರು

ಪ್ರಕಾಶನ: ಮೃಣಾಲ ಪ್ರಕಾಶನ, # 505,ಎ ಮತ್ತು ಬಿ ಬ್ಲಾಕ್ ಚಿತ್ರಭಾನು ರಸ್ತೆ, ಕುವೆಂಪು ನಗರ, ಮೈಸೂರು

ಮುದ್ರಣ:(2009) ಗುಪ್ತ ಆಫ್ ಸೆಟ್ ಪ್ರಿಂಟರ್ಸ್,ದೂರವಾಣಿ 2482023.

03. ಸ್ಥಳೀಯ ಸ್ವಯಂ ಸರ್ಕಾರಗಳು ಮತ್ತು ಮಾನವ ಹಕ್ಕುಗಳು-- ಹೆಚ್.ಸಿ ಲೋಹಿತಾಶ್ವ

ಪ್ರಕಾಶನ:ವಿದ್ಯಾನಿಧಿ ಪ್ರಕಾಶನ, ಸ್ಟೇಷನ್ ರೋಡ್, ಮಹೇಂದ್ರ ಕರ ಸರ್ಕಲ್ ಹತ್ತಿರ,ಒಂದನೇ ಅಡ್ಡ ರಸ್ತೆ, ಗದಗ -52101

ಮುದ್ರಣ -2006-07 ವಿಶಾಲ ಪ್ರಿಂಟರ್ಸ್ ಗದಗ.

ಈ ಮೇಲಿನ ಮೂರು ಪುಸ್ತಕಗಳು ನನ್ನ ಕಿರು ಸಂಶೋಧನೆಯನ್ನು ಪೂರ್ಣಗೊಳಿಸಲು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಪಂಚಾಯತ್ ರಾಜ್ ವ್ಯವಸ್ಥೆಯ ಸಂಪೂರ್ಣ ಪರಿಕಲ್ಪನೆಯನ್ನು ಹಾಗೂ ಅದರ ಅನುಕೂಲ ಅನಾನುಕೂಲಗಳನ್ನು ಈ ಮೂರು ಪುಸ್ತಕಗಳಲ್ಲಿ ಕಾಣಬಹುದಾಗಿದೆ. ಅದರ ವಿಕಸನವನ್ನು ಸಹ ಈ ಪುಸ್ತಕಗಳಲ್ಲಿ ತಿಳಿಸಲಾಗಿದೆ. ಈ ಮೂರು ಪುಸ್ತಕಗಳ ಜೊತೆಗೆ ಅಂತರ್ಜಾಲದ ಮೂಲಕವೂ ಸಹ ಈ ಕಿರು ಸಂಶೋಧನೆಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ

## ಅಧ್ಯಾಯ-2. ಭಾರತದಲ್ಲಿ ಸ್ಥಳೀಯ ಸರ್ಕಾರದ ಐತಿಹಾಸಿಕ ಹಿನ್ನೆಲೆ

ಸಂವಿಧಾನದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜನರ ಭಾಗವಹಿಸುವಿಕೆ ಮತ್ತು ಅವರು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ನಾಗರಿಕರ ಸಕ್ರಿಯ ಒಳಗೊಳ್ಳುವಿಕೆಯನ್ನು ಒತ್ತಿ ಹೇಳುತ್ತದೆ. ಭಾರತದಲ್ಲಿ ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಯ ಬೆಳವಣಿಗೆಯನ್ನು ನಾವು ಅನಾದಿಕಾಲದಿಂದಲೂ ತಿಳಿಯಬಹುದಾಗಿರುತ್ತದೆ. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಇತ್ತೀಚಿನ ಬೆಳವಣಿಗೆ ಆಗಿರದೆ ಶತ ಶತಮಾನಗಳಿಂದ ಬೆಳೆದು ಬಂದಂತಹ ವ್ಯವಸ್ಥೆಯಾಗಿದೆ ಹೀಗಾಗಿ ಭಾರತದಲ್ಲಿ ಸ್ಥಳೀಯ ಸರ್ಕಾರಗಳು ಸುದೀರ್ಘ ಇತಿಹಾಸ ಪರಂಪರೆಯನ್ನು ಹೊಂದಿದೆ. ಅದನ್ನು ಈ ಕೆಳಕಂಡ ಹಂತಗಳಲ್ಲಿ ಗುರುತಿಸಬಹುದಾಗಿದೆ.

1. ಪುರಾತನ ಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ
2. ಮಧ್ಯಯುಗದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ
3. ಮುಸ್ಲಿಂ ಆಡಳಿತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ
4. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ
5. ಸ್ವಾತಂತ್ರ್ಯ ನಂತರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ

### 1. ಪುರಾತನ ಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ

ಪಂಚಾಯತ್ ರಾಜ್ ಸಂಸ್ಥೆಗಳು ಭಾರತಕ್ಕೆ ಹೊಸದಾದವುಗಳಲ್ಲ ಇವುಗಳು ಅತ್ಯಂತ ಹಳೆಯ ಸಂಸ್ಥೆಗಳಾಗಿವೆ. ವೇದಪೂರ್ವ ದಲ್ಲೇ ಗಂಗಾ ಮತ್ತು ಯಮುನಾ ನದಿಗಳ ನಡುವೆ ಇರುವ ದೋ ಅಬ ಪ್ರದೇಶದಲ್ಲಿ ಪ್ರೀತು ಎಂಬ ದೊರೆಯು ತನ್ನ ಆಡಳಿತದಲ್ಲಿ ಪ್ರಪ್ರಥಮ ಬಾರಿಗೆ "ಪಂಚಾಯತ್ ರಾಜ್ ವ್ಯವಸ್ಥೆ"ಯನ್ನು ಜಾರಿಗೊಳಿಸಿದ್ದನೆಂದು ತಿಳಿದು ಬರುತ್ತದೆ. ವೇದಗಳ ಕಾಲದಲ್ಲಿ(ಕ್ರಿ.ಪೂ.1700) ಪಂಚಾಯಿತಿಗಳನ್ನು ಹೋಲುವ ವ್ಯವಸ್ಥೆ ಇದ್ದು ಆ ಕಾಲದಲ್ಲಿ ಗ್ರಾಮದ ಸಂಪೂರ್ಣ ಅಧಿಕಾರವನ್ನು ನೋಡಿಕೊಳ್ಳಲು "ಗ್ರಾಮೀಣಿ" ಎಂಬ ಗ್ರಾಮದ ಅಧಿಕಾರಿಯನ್ನು ನೇಮಿಸಲಾಗಿತ್ತು.

ಹತ್ತನೆಯ ಶತಮಾನದ ಪುರಾತನ ಕಥೆಗಳಲ್ಲಿ ಪ್ರಮುಖವಾಗಿ ಶುಕ್ರ ನೀತಿ ಸಾರದ ಪ್ರಕಾರ ಪ್ರಾಚೀನ ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರನ್ನು ಹೊಂದಿದ್ದು ಕಾರ್ಯಾಂಗ ಹಾಗೂ ನ್ಯಾಯಾಂಗ ಅಧಿಕಾರವನ್ನು ಹೊಂದಿದ್ದವು. ಈ ಗ್ರಾಮ ಪಂಚಾಯಿತಿ ಗ್ರಾಮದ ಶಾಂತಿಪಾಲನೆ, ಆರೋಗ್ಯ, ಶಿಕ್ಷಣ ಮತ್ತು ಸಾರ್ವಜನಿಕ ಕಟ್ಟಡಗಳ ನಿರ್ಮಾಣ, ಗೋಮಾಳ ಮತ್ತು ಅರಣ್ಯ ಪ್ರದೇಶಗಳ ರಕ್ಷಣೆ, ಭೂ ಕಂದಾಯ ವಸೂಲಿ ಮುಂತಾದ ಕಾರ್ಯಗಳನ್ನು ನಿರ್ವಹಿಸುತ್ತಿತ್ತು.

ಒಟ್ಟಿನಲ್ಲಿ ಪ್ರಾಚೀನ ಭಾರತದ ಗ್ರಾಮ ಪಂಚಾಯಿತಿಗಳು ಗ್ರಾಮ ಗಣರಾಜ್ಯಗಳಂತಿದ್ದವು. ರಾಜರ ಆಡಳಿತ ವಿದ್ದರೂ ಅವರು ಗ್ರಾಮ ಪಂಚಾಯಿತಿ ವ್ಯವಹಾರಗಳಲ್ಲಿ ಅನಾವಶ್ಯಕ ಹಸ್ತಕ್ಷೇಪ ಮಾಡುತ್ತಿರಲಿಲ್ಲ.

**2. ಮಧ್ಯಯುಗದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ**

ಚಾಳುಕ್ಯರ ಕಾಲದಲ್ಲಿ ಗ್ರಾಮ ಆಡಳಿತಕ್ಕೆ ಆದ್ಯತೆ ನೀಡಿದ್ದು ಪ್ರತಿ ಗ್ರಾಮವು "ಗ್ರಾಮ ಸಂಘ" ಎಂಬ ಆಡಳಿತ ವ್ಯವಸ್ಥೆಯನ್ನು ಹೊಂದಿತ್ತು. ಗ್ರಾಮದ ಸದಸ್ಯರನ್ನು 'ಕೌಟುಂಬಿಕ' ಅಂತಲೂ ಮತ್ತು ಗ್ರಾಮದ ನಾಯಕನನ್ನು 'ಪಟ್ಟಾಕಿಲ್' ಎಂತಲೂ, ರಾಜನನ್ನು 'ಶತಭಾಗತ' ಎಂದು ಕರೆಯಲಾಗುತ್ತಿತ್ತು. ಈ ಗ್ರಾಮದ ನಾಯಕನ ಅಧಿಕಾರವು ವಂಶಪರ್ಯವಾಗಿತ್ತು ಆದರೆ ಇವರು ತಮ್ಮ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಗುಪ್ತರ ಆಡಳಿತ ವ್ಯವಸ್ಥೆಯ ಕಾಲದಲ್ಲಿ ಗ್ರಾಮ ಆಡಳಿತಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದು ಅಧಿಕಾರವನ್ನು ವಿಕೇಂದ್ರೀಕರಣ ಗೊಳಿಸಲಾಗಿತ್ತು. ಸಾಮ್ರಾಜ್ಯವನ್ನು ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಸ್ಥಳೀಯ ಸಂಸ್ಥೆಗಳಾದ ಪಂಚಾಯತ್ ಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಿದರು. ಈ ಪಂಚಾಯತ್ ಗಳಿಗೆ 'ಮಹತ್ತರ' ಎಂದು ಕರೆಯುವುದು ರೂಢಿಯಲ್ಲಿತ್ತು.

ಚೋಳರ ಆಡಳಿತ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳು ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿದ್ದವು. ಗ್ರಾಮಗಳ ಗುಂಪನ್ನು 'ಕುರ್ರಮ್' ಎಂದು ಕರೆಯಲಾಗುತ್ತಿತ್ತು. ಈ ಪಂಚಾಯಿತಿಗಳು ತಮ್ಮ ಜಿಲ್ಲೆಗೆ ಸೇರಿದ ಗ್ರಾಮಗಳಲ್ಲಿ ಸಂಪೂರ್ಣ ಸ್ವತಂತ್ರ ಅಂದರೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಬಗ್ಗೆ ಪೂರ್ಣ ಅಧಿಕಾರ ಪಡೆದುಕೊಂಡಿದ್ದವು. ಮೌರ್ಯರ ಕಾಲದಲ್ಲಿಯೂ ಗ್ರಾಮ ಸಭೆಗಳು ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಗ್ರೀಕ್ ರಾಯಭಾರಿ ಮೆಗಾಸ್ತಾನಿಸ್ ತನ್ನ 'ಇಂಡಿಕಾ' ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾನೆ.

**3. ಮುಸ್ಲಿಂ ಆಡಳಿತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ**

ಮುಸ್ಲಿಂ ಆಡಳಿತದ ಅವಧಿಯಲ್ಲಿ ಗ್ರಾಮ ಪಂಚಾಯತ್ ವ್ಯವಸ್ಥೆ ಕಳೆಗುಂದಿತು. ಏಕೆಂದರೆ ಇವರುಗಳು ತಮ್ಮ ಅಭಿವೃದ್ಧಿಯಾದರೆ ಸಾಕು ಎಂಬ ದೋರಣ ನೀತಿಯನ್ನು ಹೊಂದಿದ್ದರೆ ವಿನಹ ಗ್ರಾಮಗಳ ಅಭಿವೃದ್ಧಿಯನ್ನಲ್ಲ. ಗ್ರಾಮಗಳಲ್ಲಿರುವ ಸಂಪತ್ತನ್ನು ದೋಚುವ ಮೂಲಕ ಅಧಿಕ ತೆರಿಗೆ ವಿಧಿಸಿ ಜನರನ್ನು ಶೋಷಣೆಗೆ ಒಳಪಡಿಸುವುದು ಇವರ ಮುಖ್ಯ ಕರ್ತವ್ಯವಾಗಿದ್ದಿತು. ಇದಕ್ಕೆ ಕಾರಣ ಪರಕೀಯರಾದಂತಹ ಮುಸ್ಲಿಂ ರಾಜರು ಮತ್ತು ಆಡಳಿತಗಾರರಲ್ಲಿ ಗ್ರಾಮಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂಬ ಸಾಮಾನ್ಯ ತಿಳುವಳಿಕೆ ಇಲ್ಲದೇ ಇರುವುದು.

ಮುಸ್ಲಿಂ ಅರಸರಲ್ಲಿ ಪ್ರಮುಖನಾಗಿದ್ದ ಅಕ್ಬರನು ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಹರಿಸಿದ ಕೆಲವು ಕಾನೂನುಗಳನ್ನು ಜಾರಿಗೆ ತಂದಿದ್ದನು. ಆದರೆ ಔರಂಗಜೇಬನ ಆಡಳಿತದಲ್ಲಿ ಅಕ್ಬರನ ಕಾಲದಲ್ಲಿ ನೀಡಿದ ಎಲ್ಲಾ ಭೂ ಇಡುವಳಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಕಸಿದುಕೊಳ್ಳಲಾಯಿತು. ಒಟ್ಟಿನಲ್ಲಿ ಭಾರತದಲ್ಲಿ ಮಹಮದ್ದೀಯರ ಆಳ್ವಿಕೆಯ ಪ್ರಾರಂಭದೊಂದಿಗೆ ಗ್ರಾಮಗಳು ತಮ್ಮ ಅಧಿಕಾರ ಸ್ಥಾನಮಾನಗಳನ್ನು ಕಳೆದುಕೊಂಡವು ಎನ್ನಬಹುದು.

**4. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ**

ಭಾರತಕ್ಕೆ ಬ್ರಿಟಿಷರು ಬಂದು ಅಧಿಕಾರ ಸ್ಥಾಪನೆಯೊಂದಿಗೆ ಮತ್ತು ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತಂದ ಪರಿಣಾಮವಾಗಿ ಪಂಚಾಯಿತಿಗಳು ತಾತ್ಕಾಲಿಕ ಹಿನ್ನೆಡೆ ಸಾಧಿಸಿದವು. ಬ್ರಿಟಿಷರ ಆಡಳಿತದ ಅವಧಿಯಲ್ಲಿ ಭಾರತೀಯ ಗ್ರಾಮಗಳ ಅಭಿವೃದ್ಧಿಯ ಬಗ್ಗೆ ಯಾವುದೇ ಆಸಕ್ತಿ ಇಲ್ಲದೆ ಇದ್ದದರಿಂದ ಹಾಗೂ ಗ್ರಾಮಗಳು ಕೇವಲ ಹಣವನ್ನು ಉತ್ಪಾದಿಸುವ ಯಂತ್ರಗಳೆಂದು ತಿಳಿದುದೇ ಪಂಚಾಯಿತಿಗಳು ದುರ್ಬಲವಾಗಲು ಕಾರಣವಾಯಿತು. ಕ್ರಮೇಣ ಪಂಚಾಯತ್ ಸಂಸ್ಥೆಗಳ ಪ್ರಾಬಲ್ಯ ಆಂಗ್ಲರಿಗೆ ಅರಿವಾದ ನಂತರ 1870 ರಲ್ಲಿ ಲಾರ್ಡ್ ಮೇರಿಯೋ ರವರ ಠರಾವಿನ ಪ್ರಕಾರ ಜಿಲ್ಲಾಧಿಕಾರಿಗಳಿಗೆ ಸಲಹೆ ನೀಡುವ ಸಲುವಾಗಿ ಗ್ರಾಮ ಸಮುದಾಯಗಳನ್ನು ಸ್ಥಾಪಿಸಲಾಯಿತು.

1882 ರಲ್ಲಿ ಲಾರ್ಡ್ ಲಿಟ್ಟನ್ ರವರು ಅಧಿಕಾರವಿಕೇಂದ್ರೀಕರಣ ನೀತಿಯನ್ನು ಪ್ರತಿಪಾದಿಸಿ ಅದಕ್ಕೆ ಅನುಗುಣವಾಗಿ ಸ್ವರಾಜ್ಯ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳನ್ನು ಬಲಿಷ್ಠ ಗೊಳಿಸುವ ದೃಷ್ಟಿಯಿಂದ ಹಲವಾರು ಶಾಸನಗಳನ್ನು ಜಾರಿಗೆ ತಂದರು. ಲಾರ್ಡ್ ಲಿಪ್ಟನ್ ರವರು ಸ್ಥಳೀಯ ಸರ್ಕಾರದ ಬಗ್ಗೆ ಗೊತ್ತುವಳಿಯನ್ನು ಜಾರಿಗೆ ತಂದು ಜಿಲ್ಲಾ ಮಂಡಳಿ, ತಾಲೂಕು ಮಂಡಳಿ ರಚಿಸುವಂತೆ ಆದೇಶಿಸಿದ್ದನು. ಈ ಮಂಡಳಿಗಳಲ್ಲಿ ಅಧಿಕಾರಿಗಳಿಗಿಂತ ಹೆಚ್ಚಾಗಿ

ಚುನಾಯಿತ ಸದಸ್ಯರಿಗೆ ಅವಕಾಶ ಕಲ್ಪಿಸಿದನು. ರಿಪ್ಪನ್ನಿನ ಈ ನೀತಿಯು ರಾಜಕೀಯ ಮತ್ತು ಜನತಾ ಶಿಕ್ಷಣದ ಸಾಧನವಾಗಿತ್ತು. ಇದು ಸ್ಥಳೀಯ ಸರ್ಕಾರಕ್ಕೆ ಪ್ರಾತಿನಿಧ್ಯ ನೀಡಿದ್ದಲ್ಲದೆ ಜನಪರ ದೃಷ್ಟಿಕೋನಕ್ಕೆ ಹೆಚ್ಚಿನ ಗಮನ ಹರಿಸಿತ್ತು. ಲಿಪ್ಪನ್ ಸ್ಥಳೀಯ ಸಂಸ್ಥೆಯಲ್ಲಿ ನೂತನ ವಿದ್ಯಾವಂತ, ಮಧ್ಯಮ ವರ್ಗದವರಿಗೆ ಅವಕಾಶ ಕಲ್ಪಿಸಿ ಕೊಡುವುದರ ಮೂಲಕ ಕಟ್ಟುನಿಟ್ಟಿನ ನೌಕರಶಾಹಿಗೆ ಕಡಿವಾಣ ಹಾಕಲು ಪ್ರಯತ್ನಿಸಿದ್ದನು. ಇದು ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಿತ್ತು. ಹೀಗಾಗಿ ಲಾರ್ಡ್ ಲಿಪ್ಪನ್ ರವರನ್ನು "ಭಾರತದ ಸ್ಥಳೀಯ ಸರ್ಕಾರದ ಪಿತಾಮಹ" ಎಂದು ಕರೆಯಲಾಯಿತು.

1918ರ ಮಾಂಟೆಗೋ ಚೆಮ್ಸ್ ಪರ್ಡ್ ಸುಧಾರಣೆಗಳಿಗೆ ಅನುಗುಣವಾಗಿ 1919ರಲ್ಲಿ ಸುಧಾರಣಾ ಕಾಯಿದೆ ಜಾರಿಗೆ ಬಂದವು. ಅದರ ಪ್ರಕಾರ ಕೆಲವೊಂದು ಪ್ರಾಂತ್ಯಗಳಲ್ಲಿ ಪಂಚಾಯತ್ ರಾಜ್ ಸ್ಥಾಪನೆಯಾಯಿತು. ಆದರೆ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಿಲ್ಲ. ಜೊತೆಗೆ ಹಣಕಾಸಿನ ಕೊರತೆಯಿಂದ ಹೆಚ್ಚಿನ ಯಶಸ್ಸನ್ನು ಕಾಣಲಿಲ್ಲ.

1920ರ ಅವಧಿಯಲ್ಲಿ ಮಹಾತ್ಮ ಗಾಂಧೀಜಿಯವರು ಸ್ಥಳೀಯ ಸ್ವಯಂ ಸರ್ಕಾರಗಳನ್ನು ಬೆಂಬಲಿಸಿ ಗ್ರಾಮ ಗಣರಾಜ್ಯಗಳನ್ನು ಕಟ್ಟುವ ಕನಸನ್ನು ಮುಂದಿಟ್ಟರು ರಾಮ ರಾಜ್ಯದ ಕನಸು ನನಸಾಗಬೇಕಾದರೆ ಗ್ರಾಮಸ್ವರಾಜ್ಯ ಸೃಷ್ಟಿಯಾಗಬೇಕೆಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು ಇದರಿಂದ ಸ್ಥಳೀಯ ಸರ್ಕಾರಗಳನ್ನು ಅನುಷ್ಠಾನಗೊಳಿಸುವಂತೆ ಬ್ರಿಟಿಷರನ್ನು ಪ್ರಬಲವಾಗಿ ಒತ್ತಾಯಿಸಿದರು. ಆದರೆ ಬ್ರಿಟಿಷ್ ಸರ್ಕಾರ ಈ ಒತ್ತಾಯಕ್ಕೆ ಯಾವುದೇ ರೀತಿಯ ಗಮನ ಹರಿಸಲಿಲ್ಲ. 1935 ರ ಭಾರತ ಸರ್ಕಾರ ಕಾಯಿದೆ ಸ್ಥಳೀಯ ಸರ್ಕಾರ ಸಂಸ್ಥೆಗಳಿಗೆ ಸಾಕಷ್ಟು ಅಧಿಕಾರವನ್ನು ನೀಡಿತ್ತು. ಆದರೆ ಎರಡನೆಯ ಮಹಾಯುದ್ಧ ಪ್ರಾರಂಭವಾದ ಪರಿಣಾಮವಾಗಿ ಈ ಕಾಯ್ದೆಯಲ್ಲಿನ ಅಂಶಗಳನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ.

ಒಟ್ಟಿನಲ್ಲಿ ಬ್ರಿಟಿಷ್ ಆಡಳಿತ ಅವಧಿಯಲ್ಲಿ ಕೆಲವು ಭಾರತೀಯ ಮುಖಂಡರು ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಳೀಯ ಸರ್ಕಾರಗಳನ್ನು ಸಂಘಟಿಸಲು ಪ್ರಯತ್ನಿಸಿದರು. ಆದರೆ ಅದು ಪರಕೀಯರ ಆಡಳಿತದಿಂದ ಸಾಧ್ಯವಾಗಲಿಲ್ಲ

**5. ಸ್ವಾತಂತ್ರ್ಯ ನಂತರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ**

ಭಾರತ ಸ್ವಾತಂತ್ರ್ಯದ ನಂತರ ಗ್ರಾಮ ಪಂಚಾಯಿತಿಗಳ ವಿಷಯಗಳಲ್ಲಿ ಮಹತ್ವದ ಬದಲಾವಣೆ ಕಂಡುಬಂದವು. ಈ ಬದಲಾವಣೆಗೆ ಮುಖ್ಯವಾಗಿ ನಾಲ್ಕು ಅಂಶಗಳು ಕಾರಣವಾಗಿದೆ. ಅವುಗಳೆಂದರೆ,

1. ಮಹಾತ್ಮ ಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಕಲ್ಪನೆಗೆ ಪ್ರಥಮ ಪ್ರಾಶಸ್ತ್ಯ ನೀಡಿದ್ದು.

2. ಭಾರತದ ಸಂವಿಧಾನದಲ್ಲಿ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಮಾನ್ಯತೆ ನೀಡಿದ್ದು.

3. ಸ್ಥಳೀಯರ ಸಹಕಾರದಿಂದ ಗ್ರಾಮೀಣ ಅಭಿವೃದ್ಧಿ ಸಾಧಿಸುವ ಸಲುವಾಗಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದು.

4. ಪಂಚವಾರ್ಷಿಕ ಯೋಜನೆಗಳಲ್ಲಿ ಜನರು ಪಾಲ್ಗೊಳ್ಳುವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದು.

ಈ ಮೇಲ್ಕಂಡ ನಾಲ್ಕು ಅಂಶಗಳು ಪಂಚಾಯತ್ ರಾಜ್ ವ್ಯವಸ್ಥೆ ಸಂವಿಧಾನದಲ್ಲಿ ಆಳವಾಗಿ ಬೇರೂರಲು ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರಣವಾದವು. ಸಂವಿಧಾನದ ನಾಲ್ಕನೇ ಭಾಗದಲ್ಲಿನ ರಾಜ್ಯ ನಿರ್ದೇಶಕ ತತ್ವಗಳಲ್ಲಿರುವ 40ನೇ ವಿಧಿಯು ಗ್ರಾಮ ಪಂಚಾಯಿತಿಯನ್ನು ರಚಿಸಿ ದಕ್ಷತೆಯಿಂದ ಕೆಲಸ ಮಾಡಲು ಸಾಕಷ್ಟು ಅಧಿಕಾರವನ್ನು ನೀಡಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕಾದ ಎಲ್ಲಾ ಅನುಕೂಲತೆಗಳನ್ನು ರಾಜ್ಯವು ಒದಗಿಸಿ ಕೊಡಬೇಕು ಎಂದು ಸೂಚಿಸಿದೆ. ಇದಕ್ಕೆ ಅನುಗುಣವಾಗಿ 1951 ರಲ್ಲಿ ಸುಮಾರು 83,000 ಪಂಚಾಯತ್ ಗಳು ಹಾಗೂ 1954ರ ವೇಳೆಗೆ 98 ಸಾವಿರ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದವು.

ಅಧಿಕಾರ ವಿಕೇಂದ್ರೀಕರಣದ ಮೂಲಕ ಸ್ಥಳೀಯ ಸಂಸ್ಥೆಗಳನ್ನು ಬಲಗೊಳಿಸುವ ಉದ್ದೇಶದಿಂದ ಸ್ವಾತಂತ್ರ್ಯದ ನಂತರ ಈ ಕೆಳಕಂಡ ಕೆಲವು ಸಮಿತಿಗಳನ್ನು ರಚಿಸಲಾಯಿತು.

1. ಬಲವಂತರಾಯ್ ಮೆಹತಾ ಸಮಿತಿ : 1957 - 58

2. ಕೆ. ಸಂತಾನಮ್ ಸಮಿತಿ : 1964 - 65

3. ಅಶೋಕ್ ಮೆಹ್ತಾ ಸಮಿತಿ : 1977 - 78

4. ಜೆ.ವಿ.ಕೆ ರಾವ್ ಸಮಿತಿ : 1985

5.ಎಲ್.ಎಮ್.ಸಿಂಘೀ ಸಮಿತಿ :1986

ಈ ಮೇಲಿನ ಸಮಿತಿಗಳಲ್ಲಿ ಬಲವಂತರಾಯ್ ಮೆಹತಾ ಸಮಿತಿ ಅಶೋಕ ಮೆಹ್ತಾ ಸಮಿತಿಗಳು ಅತ್ಯಂತ ಪರಿಣಾಮಕಾರಿಯಾದ ಶಿಫಾರಸುಗಳನ್ನು ನೀಡಿದವು. ಈ ಸಮಿತಿಗಳ ಸಲಹೆಗಳು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಹಾಗೂ ಬಲಪಡಿಸುವ ಕಾರ್ಯದಲ್ಲಿ ಪ್ರಮುಖವಾದ ಪಾತ್ರ ವಹಿಸಿದವು.

## ಬಲವಂತರಾಯ್ ಮೆಹತಾ ಸಮಿತಿ (1957 – 58)

ಭಾರತದ ಸಂವಿಧಾನ ಜಾರಿಗೆ ಬಂದ ನಂತರ ಹೊಸ ಬಗೆಯ ಪಂಚಾಯತ್ ರಾಜ್ ವ್ಯವಸ್ಥೆಯ ಉಗಮವನ್ನು 1951ರ ಬಲವಂತರಾಯ್ ಮೆಹತಾ ಸಮಿತಿಯ ವರದಿಗಳಲ್ಲಿ ಕಾಣಬಹುದಾಗಿದೆ. 1952ರಲ್ಲಿ ಜಾರಿಗೆ ತಂದ "ಸಮುದಾಯ ಅಭಿವೃದ್ಧಿ" ಯೋಜನೆ ಮತ್ತು 1953ರ ರಾಷ್ಟ್ರೀಯ ವಿಸ್ತರಣಾ ಸೇವೆಯ ಕಾರ್ಯಕ್ರಮಗಳ ಕಾರ್ಯ ನಿರ್ವಹಣೆಯ ಮೌಲ್ಯಮಾಪನದ ಉದ್ದೇಶಕ್ಕಾಗಿ ಈ ಸಮಿತಿಯನ್ನು 1957ರಲ್ಲಿ ಜವಾಹರ್ ಲಾಲ್ ನೆಹರು ರವರು ಬಲವಂತರಾಯ್ ಮೇಹತ ರವರ ನಾಯಕತ್ವದಲ್ಲಿ ನೇಮಿಸಿದರು.

ಬಲವಂತರಾಯ್ ಮೆಹ್ತಾ ಸಮಿತಿಯ ಶಿಫಾರಸ್ಸುಗಳು

1. ಪಂಚಾಯತ್ ರಾಜ್ ವ್ಯವಸ್ಥೆಯು ಮೂರು ಶ್ರೇಣಿಯ ಪದ್ಧತಿಯನ್ನು ಹೊಂದಿರಬೇಕು ಮತ್ತು ಈ ಸಂಸ್ಥೆಗಳು ಒಂದಕ್ಕೊಂದು ಸಂಬಂಧ ಹೊಂದಿರಬೇಕು

2. ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ಮತ್ತು ಹೆಚ್ಚಿನ ಜವಾಬ್ದಾರಿಗಳನ್ನು ನೀಡುವುದು.

3. ಸಂಸ್ಥೆಗಳು ಜವಾಬ್ದಾರಿಯಿಂದ ನಿರ್ವಹಿಸಲು ಹೆಚ್ಚಿನ ರೀತಿಯಲ್ಲಿ ಸಂಪನ್ಮೂಲವನ್ನು ರಾಜ್ಯ ಸರ್ಕಾರ ಒದಗಿಸಬೇಕು.

4. ಪಂಚಾಯಿತಿಯ ಚುನಾಯಿತ ಅಧಿಕಾರ ಅವಧಿ ಮುಗಿದ ನಂತರ ಅವುಗಳ ಅಧಿಕಾರ ಮತ್ತು ಜವಾಬ್ದಾರಿಯನ್ನು ವಿಸರ್ಜಿಸುವ ವ್ಯವಸ್ಥೆ ಇರಬೇಕು.

5. ಈ ಸಮಿತಿಯು ಅಧಿಕಾರ ವಿಕೇಂದ್ರೀಕರಣಕ್ಕೆ ಉತ್ತೇಜನ ನೀಡಿದ್ದು ಸಂಸತ್ತಿನಿಂದ ಹಿಡಿದು ಪಂಚಾಯತ್ ವರೆಗೆ ಅಧಿಕಾರ ವರ್ಗಾವಣೆಯಾಗಬೇಕು.

6. ಪ್ರತಿಯೊಂದು ಪಂಚಾಯಿತಿ ಸ್ವ ಜನರಿಂದ ಚುನಾಯಿತರಾದ ಸಂಸ್ಥೆ ಆಗಬೇಕು.

7. ಪಂಚಾಯಿತಿಗಳು ಸರ್ಕಾರ ಮತ್ತು ಜನತೆಯ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುವಂತೆ ಪ್ರೋತ್ಸಾಹಿಸಬೇಕು.

8. ಪಂಚಾಯಿತಿಗಳ ವಾರ್ಷಿಕ ಆಯವ್ಯಯದ ಪರಿಶೀಲನೆಯನ್ನು ಪಂಚಾಯತ್ ಸಮಿತಿಯು ನಿರ್ವಹಿಸಲು ಅವಕಾಶ ನೀಡಬೇಕು.

9. ಗ್ರಾಮಾಂತದ ಅಭಿವೃದ್ಧಿ ಕಾರ್ಯದಲ್ಲಿ ಮುಖ್ಯ ನಿಯೋಗಿಯಾಗಿ ಪಂಚಾಯಿತಿಯು ಕಾರ್ಯನಿರ್ವಹಿಸುವುದು.

10. ಗ್ರಾಮ ಪಂಚಾಯಿತಿಯು ತನಗೆ ಬರುವ ಆದಾಯವನ್ನು ಖರ್ಚು ಮಾಡುವಂತೆ ಸ್ವಾತಂತ್ರ್ಯವನ್ನು ಹೊಂದಿರುವಂತೆ ವ್ಯವಸ್ಥೆ ಮಾಡಬೇಕು.

ಈ ಮೇಲಿನ ವರದಿಗಳಂತೆ ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರಥಮವಾಗಿ ರಾಜಸ್ಥಾನದಲ್ಲಿ 1958ರ ಅಕ್ಟೋಬರ್ 2ರಂದು ಜಾರಿಗೆ ತರಲಾಯಿತು. 1960ರ ಮಧ್ಯಭಾಗದಲ್ಲಿ ರಾಷ್ಟ್ರಾದ್ಯಂತ ಈ ವ್ಯವಸ್ಥೆ ಪ್ರಾಮುಖ್ಯತೆ ಪಡೆಯಿತು. ಇದರ ಪರಿಣಾಮವಾಗಿ ಭಾರತದಲ್ಲಿ ಸುಮಾರು 2,17,500 ಗ್ರಾಮ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿದ್ದು 57000 ಗ್ರಾಮಗಳಿರುವ ರಾಷ್ಟ್ರದಲ್ಲಿ ಸುಮಾರು 96% ರಷ್ಟು ಗ್ರಾಮಗಳು ಪಂಚಾಯಿತಿಗಳನ್ನು ಸ್ಥಾಪಿಸಿಕೊಂಡು 90% ರಷ್ಟು ಗ್ರಾಮೀಣ ಜನರ ಅವಶ್ಯಕತೆಗಳನ್ನು ಈಡೇರಿಸಿದವು. ಒಟ್ಟಿನಲ್ಲಿ ಬಲವಂತರಾಯ್ ಮೆಹತಾ ಸಮಿತಿಯ ಶಿಫಾರಸುಗಳು ಸ್ಥಳೀಯ ಸರ್ಕಾರದ ಬೆಳವಣಿಗೆಗೆ ಸಹಾಯಕವಾಯಿತು. ಹೀಗಾಗಿ ಬಲವಂತರಾಯ ಮೆಹತಾ ವರದಿಯನ್ನು 'ಐತಿಹಾಸಿಕ ದಾಖಲೆ', ಪಂಚಾಯತ್ ರಾಜ್ ವ್ಯವಸ್ಥೆಯ ಬೈಬಲ್ ಮತ್ತು ನೀಲಿ ನಕ್ಷೆಯ ಮೂಲ ಪ್ರತಿ ಎಂದರೆ ಪರಿಗಣಿಸಲಾಗಿದೆ.

## ಅಶೋಕ್ ಮೆಹ್ತಾ ಸಮಿತಿ (1977 – 78)

ಭಾರತದಲ್ಲಿ ಸ್ಥಳೀಯ ಸ್ವಯಂ ಸರ್ಕಾರದ ಬೆಳವಣಿಗೆಯಲ್ಲಿ ಅಶೋಕ್ ಮೆಹತಾ ಸಮಿತಿ ನೀಡಿರುವ ಶಿಫಾರಸುಗಳು ಪ್ರಮುಖ ಪಾತ್ರ ವಹಿಸಿದೆ. 1957ರ ಬಲವಂತರಾಯ್ ಮೆಹತಾ ಸಮಿತಿಯು ನೀಡಿದ ಸಲಹೆ ಸಂವಿಧಾನಕ್ಕೆ ಅನುಗುಣವಾಗಿ ಜಾರಿಗೆ ತರುವುದು ಕಷ್ಟವಾಯಿತು. ಆದರೆ ರಾಜ್ಯ ನೀತಿ ನಿರ್ದೇಶಕ ತತ್ವಗಳಲ್ಲಿರುವ 40ನೇ ವಿಧಿಯ ಪ್ರಕಾರ ಪ್ರತಿನಿಧಿ ಪ್ರಜಾಪ್ರಭುತ್ವದ ತತ್ವಕ್ಕೆ ಅನುಗುಣವಾಗಿ ಪ್ರತಿಯೊಂದು ಗ್ರಾಮ ಪಂಚಾಯಿತಿ ಅಥವಾ

ಪ್ರತಿಯೊಂದು ಸ್ಥಳೀಯ ಘಟಕವನ್ನು ಪ್ರತಿನಿಧಿ ಪ್ರಜಾಪ್ರಭುತ್ವದ ಒಂದು ಘಟಕ ಎಂದು ಪರಿಗಣಿಸಿ, ದೇಶದ ಎಲ್ಲಾ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ಚುನಾವಣೆ ನಡೆಸುವುದು ವಾಸ್ತವದಲ್ಲಿ ಸಾಧ್ಯವಿಲ್ಲವೆಂಬುದು ಅರಿವಾಯಿತು.

1977ರಲ್ಲಿ ಪಂಚಾಯತ್ ಗಳ ಆಡಳಿತವನ್ನು ಮತ್ತಷ್ಟು ಸುಧಾರಿಸಲು ಮತ್ತು ಅವುಗಳ ಪುನರ್ ರಚನೆಗಾಗಿ ಅಂದಿನ ಜನತಾ ಸರ್ಕಾರವು 1977 ಡಿಸೆಂಬರ್ ನಲ್ಲಿ ಅಶೋಕ್ ಮೆಹ್ತಾ ರವರ ಅಧ್ಯಕ್ಷತೆಯಲ್ಲಿ ಅಶೋಕ್ ಮೆಹೆತಾ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯ ಉದ್ದೇಶವೆಂದರೆ ಸ್ಥಳೀಯ ಸರ್ಕಾರಗಳ ಕಾರ್ಯಗಳ ಪರಿಶೀಲನೆ ಹಾಗೂ ಅವುಗಳಲ್ಲಿರುವ ತೊಂದರೆಗಳ ನಿವಾರಣೆಗೆ ಸಲಹೆ ನೀಡುವುದಾಗಿತ್ತು. ಈ ಸಮಿತಿ ದೇಶದ ವಿವಿಧ ರಾಜ್ಯಗಳಲ್ಲಿದ್ದ ಪಂಚಾಯತ್ ವ್ಯವಸ್ಥೆಯನ್ನು ಅಧ್ಯಯನ ಮಾಡಿ 1978 ರಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ನಂತರ 1989ರಲ್ಲಿ ಸಂವಿಧಾನಕ್ಕೆ 64ನೇ ತಿದ್ದುಪಡಿ ತರುವ ಪ್ರಯತ್ನ ನಡೆಯಿತು. ಈ ಮಸೂದೆಯು ಬಹುತೇಕ ಮಟ್ಟಿಗೆ ಅಶೋಕ್ ಮೆಹತಾ ಸಮಿತಿಯ ವರದಿಯನ್ನು ಆದರಿಸಿತು. ಈ ಸಮಿತಿ 132 ಶಿಫಾರಸ್ಸುಗಳನ್ನು ಹೊಂದಿತ್ತು ಮತ್ತು 301 ಪುಟಗಳ ವರದಿಯನ್ನು ತಯಾರಿಸಿತ್ತು. ಮೂರು ಹಂತದ ವ್ಯವಸ್ಥೆಗಿಂತ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಎಂಬ ಎರಡು ಅಂಕದ ಸ್ಥಳೀಯ ಆಡಳಿತ ವ್ಯವಸ್ಥೆ ಇದ್ದರೆ ಸಾಕು ಎಂಬ ಅಭಿಪ್ರಾಯ ಈ ಸಮಿತಿಯದ್ದಾಗಿತ್ತು.

ಅಶೋಕ್ ಮೆಹತಾ ಸಮಿತಿಯ ಶಿಫಾರಸ್ಸುಗಳು

1. ಬಲವಂತರಾಯ ಮೆಹತಾ ಸಮಿತಿಯು ಶಿಫಾರಸ್ಸು ಮಾಡಿದ ಮೂರು ಅಂತದ ಸ್ಥಳೀಯ ಆಡಳಿತ ಸಂಸ್ಥೆಗಳ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾಗಿ ಎರಡು ಹಂತದ ಸ್ಥಳೀಯ ಆಡಳಿತ ವ್ಯವಸ್ಥೆ ಇದ್ದರೆ ಸಾಕು ಎಂದು ತಿಳಿಸಿತು.

2. 15000 - 20,000 ಜನಸಂಖ್ಯೆಗಳೊಳಗೊಂಡ ಗ್ರಾಮಗಳಿಗೆ ಒಂದು ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾಮಟ್ಟದಲ್ಲಿ ಒಂದು ಜಿಲ್ಲಾ ಪಂಚಾಯಿತಿಯನ್ನು ಸ್ಥಾಪಿಸುವುದು.

3. ಪ್ರತಿಯೊಂದು ರಾಜ್ಯದಲ್ಲಿ ಪಂಚಾಯತ್ ರಾಜ್ ಇಲಾಖೆಗೆ ಮಂತ್ರಿಗಳು ಇರಬೇಕು.

4. ಪಂಚಾಯತ್ ಸಂಸ್ಥೆಗಳ ಚುನಾವಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಮತ್ತು ಮಹಿಳೆಯರಿಗೆ ಮೀಸಲಾತಿ ಸೌಲಭ್ಯಗಳಿರಬೇಕು.

5. ನಗರದ ಮೂಲ ಅವಶ್ಯಕತೆಗಳಾದ ಕುಡಿಯುವ ನೀರು, ರಸ್ತೆ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಶಿಕ್ಷಣ ಸೌಲಭ್ಯ ಮುಂತಾದ ಸೌಲಭ್ಯಗಳನ್ನು ಗ್ರಾಮಗಳಿಗೂ ವಿಸ್ತರಿಸಬೇಕು.

6. ಒಬ್ಬ ಅರ್ಹ ನ್ಯಾಯಾಧೀಶನ ಅಧ್ಯಕ್ಷತೆಯಲ್ಲಿ ನ್ಯಾಯ ಪಂಚಾಯಿತಿಯನ್ನು ಸ್ಥಾಪಿಸುವುದು.

7. ಪ್ರತಿಯೊಂದು ಜಿಲ್ಲಾ ಪರಿಷತ್ತಿನಲ್ಲಿ ಒಂದು ಸಾಮಾಜಿಕ ನ್ಯಾಯ ಸಮಿತಿಯನ್ನು ಸ್ಥಾಪಿಸುವುದು.

8. ಪಂಚಾಯಿತಿಯ ಮೇರೆಗೆ ತರುವ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ರಾಜ್ಯ ಸರ್ಕಾರಗಳು ಆಗಾಗ್ಗೆ ಪರಿಶೀಲಿಸಬೇಕು.

9. ಜಿಲ್ಲಾ ಮಟ್ಟದಲ್ಲಿ ರೂಪಿಸುವ ಯೋಜನೆಗಳಿಗೆ ಜಿಲ್ಲಾ ಪರಿಷತ್ತನ್ನು ಜವಾಬ್ದಾರಿಯನ್ನಾಗಿರಿಸುವುದು.

10. ಅಭಿವೃದ್ಧಿ ಕಾರ್ಯವನ್ನು ಜಿಲ್ಲಾ ಪರಿಷತ್ ಗೆ ವರ್ಗಾಯಿಸುವುದು.

11. ಗ್ರಾಮ ಸಭೆಯ ರಚನೆಗೆ ವ್ಯವಸ್ಥೆ ಮಾಡುವುದು.

ಹೀಗೆ ಅಶೋಕ್ ಮೆಹ್ತಾ ಸಮಿತಿಯು ಪಂಚಾಯತ್ ರಾಜ್ ಸಂಸ್ಥೆಗಳ ಬಗ್ಗೆ ನೀಡಿದ ಸಲಹೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕಳುಹಿಸಿ ಕೊಟ್ಟಿತು.

ಒಟ್ಟಿನಲ್ಲಿ ಬಲವಂತರಾಯ್ ಮೆಹ್ತಾ ಸಮಿತಿ ಮತ್ತು ಅಶೋಕ್ ಮೆಹ್ತಾ ಸಮಿತಿಗಳ ಶಿಫಾರಸ್ಸುಗಳು ಭಾರತದಲ್ಲಿ ಪಂಚಾಯತ್ ರಾಜ್ ಸಂಸ್ಥೆಯನ್ನು ಪುನರುಜ್ಜೀವನಗೊಳಿಸುವಲ್ಲಿ ಮತ್ತು ಬಲಪಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು. ಪ್ರಜಾಪ್ರಭುತ್ವದ ಆಡಳಿತ ಅಧಿಕಾರವನ್ನು ವಿಕೇಂದ್ರೀಕರಣ ಗೊಳಿಸಲು ಈ ಸಮಿತಿಗಳ ಶಿಫಾರಸುಗಳು ಸಹಕಾರಿಯದವು.

## 2.1 ಸಂವಿಧಾನಾತ್ಮಕ ಸ್ಥಾನಮಾನ

ರಾಷ್ಟ್ರದ ಅಭಿವೃದ್ಧಿಯಲ್ಲಿ ಜನತೆ ಭಾಗವಹಿಸುವುದು ಭಾರತದ ಪ್ರಜಾಪ್ರಭುತ್ವದ ಉದ್ದೇಶವಾಗಿದೆ. ಮೇಲಿನ ಹಂತದಿಂದ ಹಿಡಿದು ಕೆಳಗಿನ ಹಂತದವರೆಗೆ ಅಧಿಕಾರವನ್ನು ವರ್ಗಾಯಿಸುವ ಮೂಲಕ ಪ್ರಜಾಪ್ರಭುತ್ವಕ್ಕೆ ವಿಶಾಲ ತಳಹದಿಯನ್ನು ರೂಪಿಸುವುದರ ಜೊತೆಗೆ

ಕೆಳ ಹಂತದಲ್ಲಿ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವಲ್ಲಿ ಸ್ಥಳೀಯ ಸರ್ಕಾರ ಪರಿಣಾಮಕಾರಿಯಾದ ವ್ಯವಸ್ಥೆಯಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಸ್ಥಳೀಯ ಸಂಸ್ಥೆಗಳಲ್ಲಿ ಏಕರೂಪತೆಯನ್ನು ಕಾಯ್ದುಕೊಂಡು ಬರಲು ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಗೆ ಪುನರ್ ಜೀವ ನೀಡಲು ಭಾರತ ಸರ್ಕಾರವು 1957 ರಲ್ಲಿ ಬಲವಂತರಾಯ್ ಮೆಹತಾ ಸಮಿತಿ ಮತ್ತು 1977 ರಲ್ಲಿ ಅಶೋಕ್ ಮೆಹ್ತಾ ಸಮಿತಿಗಳನ್ನು ರಚಿಸಿ ಅದರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿತು. ಆ ನಂತರದ ಪ್ರಯತ್ನದಲ್ಲಿ ರಾಜೀವ್ ಗಾಂಧಿ ಅವರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ನಿರ್ದಿಷ್ಟವಾದ ರೂಪುರೇಖೆಗಳನ್ನು ಸೇರಿಸಬೇಕೆಂಬ ಬಲವಾದ ಇಚ್ಛೆಯನ್ನು ಹೊಂದಿದ್ದರು. ಹೀಗಾಗಿ 1989ರಲ್ಲಿ ಸಂಸತ್ತಿನಲ್ಲಿ ರಾಜೀವ್ ಗಾಂಧಿ ಅವರು ಪಂಚಾಯತ್ ರಾಜ್ ಮಸೂದೆಯನ್ನು ಮಂಡಿಸಿದರು. ಆ ಮಸೂದೆಗೆ ರಾಜ್ಯಸಭೆಯಲ್ಲಿ ಬಹುಮತ ದೊರೆಯದೆ ಅಂಗೀಕೃತಗೊಳ್ಳಲಿಲ್ಲ. 1990ರಲ್ಲಿ ಎರಡನೇ ಪ್ರಯತ್ನವನ್ನು ವಿ ಪಿ ಸಿಂಗ್ ಸರ್ಕಾರ ನಡೆಸಿತು. ಆದರೆ ಆ ಪ್ರಯತ್ನವೂ ಸಹ ವಿಫಲವಾಯಿತು. ನಂತರ 1990 ರಲ್ಲಿ ಸಾರ್ವತ್ರಿಕ ಚುನಾವಣೆಗಳು ಹತ್ತಿರ ಬಂದ ಸಮಯದಲ್ಲಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಅಧಿಕಾರ ಸ್ವೀಕಾರ ಮಾಡಿದ ನೂರು ದಿನಗಳ ಒಳಗಾಗಿ ಸ್ಥಳೀಯ ಸಂಸ್ಥೆಗಳ ಬಗೆಗೆ ಸಂವಿಧಾನ ತಿದ್ದುಪಡಿ ತರಲಾಗುವುದೆಂದು ಘೋಷಣೆ ಮಾಡಿತು. ಹೀಗಾಗಿ 1992ರಲ್ಲಿ ಕಾಂಗ್ರೆಸ್ ಪಕ್ಷದಿಂದ ಪ್ರಧಾನಮಂತ್ರಿಯಾಗಿ ನೇಮಕವಾದ ಪಿ. ವಿ. ನರಸಿಂಹರಾವ್ ರವರು ಅಧಿಕಾರ ಸ್ವೀಕಾರ ಮಾಡಿ ನೂರು ದಿನದೊಳಗೆ ಪಂಚಾಯತ್ ರಾಜ್ ಮಸೂದೆಗೆ ಸಂಬಂಧಪಟ್ಟ ನಿಯಮಗಳನ್ನು ಕೈಗೆತ್ತಿಕೊಂಡು ಪರಿಶೀಲಿಸಿ ಮಸೂದೆಯನ್ನು ಸದನದಲ್ಲಿ ಮಂಡಿಸಿ ಅದಕ್ಕೆ ಬೇಕಾದ ಬಹುಮತವನ್ನು ಗಳಿಸುವಲ್ಲಿ ಯಶಸ್ವಿಯಾದರು, ಇದರ ಫಲವೇ ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗಳಾಗಿದ್ದು. ತಿದ್ದುಪಡಿಗಳು 1992 ರಲ್ಲಿ ಸಂಸತ್ತಿನ ಎರಡೂ ಸದನಗಳ ಅನುಮೋದನೆ ಪಡೆಯುವ ಜೊತೆಗೆ ರಾಜ್ಯ ವಿಧಾನ ಮಂಡಲಗಳಿಂದಲೂ ಅನುಮೋದನೆಯನ್ನು ಪಡೆದು ಅಂತಿಮವಾಗಿ ಏಪ್ರಿಲ್ 30, 1993ರಲ್ಲಿ ರಾಷ್ಟ್ರಪತಿ ಒಪ್ಪಿಗೆ ಪಡೆಯಿತು ಇದರ ಪರಿಣಾಮ 73ನೇ ತಿದ್ದುಪಡಿ ಕಾಯ್ದೆಗೆ ಸಂವಿಧಾನಕ್ಕೆ 9 ನೇ ಭಾಗಕ್ಕೆ 243A ಯಿಂದ 243O ಅನುಚ್ಛೇದಗಳನ್ನು ಹಾಗೂ 29 ವಿಷಯಗಳನ್ನೊಳಗೊಂಡ 11ನೇ ಅನುಸೂಚಿ ಸೇರಿಸಲಾಯಿತು. ಮತ್ತು 74ನೇ ತಿದ್ದುಪಡಿ ಕಾಯ್ದೆಗೆ ಸಂವಿಧಾನದ 9 ನೇ ಭಾಗಕ್ಕೆ 243P ಯಿಂದ 243ZG

ಅನುಚ್ಛೇದಗಳನ್ನು ಹಾಗೂ 18 ವಿಷಯಗಳನ್ನು ಒಳಗೊಂಡ 12ನೇ ಅನುಸೂಚಿಯನ್ನು ಸೇರಿಸಲಾಯಿತು.

### a)73 ನೇ ಸಂವಿಧಾನ ತಿದ್ದುಪಡಿಯ ಅಂಶಗಳು

ಸಂವಿಧಾನಕ್ಕೆ ಜಾರಿಗೆ ತಂದ 73ನೇ ತಿದ್ದುಪಡಿಯಿಂದಾಗಿ ಪಂಚಾಯಿತಿಗಳಿಗೆ ಸಂಬಂಧಿಸಿದ 243A ಯಿಂದ 243O ರವರೆಗಿನ ವಿಧಿಗಳನ್ನು ಒಳಗೊಂಡ 9 ನೇ ಹೊಸ ಭಾಗವನ್ನು ಹಾಗೂ 29 ವಿಷಯಗಳನ್ನು ಒಳಗೊಂಡ 11ನೇ ಅನುಸೂಚಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು. 73ನೇ ತಿದ್ದುಪಡಿಯು 1992 ರಲ್ಲಿ ಸಂಸತ್ತಿನ ಒಪ್ಪಿಗೆ ಪಡೆದು 1993 ಏಪ್ರಿಲ್ 30 ರಂದು ಜಾರಿಗೆ ಬಂದಿತು. 73ನೇ ಸಂವಿಧಾನ ತಿದ್ದುಪಡಿಯ ವಿಧಿಗಳ ವಿಷಯ ಅಂಶಗಳು ಈ ಮುಂದಿನಂತಿವೆ.

| ಕ್ರಮ ಸಂಖ್ಯೆ | ಅನುಚ್ಛೇದ | ವಿಷಯಾಂಶಗಳು (ಒಳಗೊಂಡಿರುವ ವಿಷಯ) |
|---|---|---|
| 1 | 243 | ಅರ್ಥ ವಿವರಣೆ |
| 2 | 243A | ಗ್ರಾಮಸಭೆ ರಚನೆ |
| 3 | 243B | ಪಂಚಾಯಿತಿಗಳ ರಚನೆ |
| 4 | 243C | ಪಂಚಾಯಿತಿಗಳ ಅಂಗ ರಚನೆ |
| 5 | 243D | ಸದಸ್ಯರ ಮೀಸಲಾತಿ |
| 6 | 243E | ಪಂಚಾಯ್ತಿಗಳ ಅಧಿಕಾರ ಅವಧಿ |
| 7 | 243F | ಸದಸ್ಯರ ಅರ್ಹತೆಗಳು |
| 8 | 243G | ಪಂಚಾಯಿತಿಯ ಅಧಿಕಾರ ಮತ್ತು ಕಾರ್ಯಗಳು |
| 9 | 243H | ತೆರಿಗೆಗಳನ್ನು ವಿಧಿಸಲು ಪಂಚಾಯಿತಿಗಿರುವ ಅಧಿಕಾರ |
| 10 | 243I | ಹಣಕಾಸು ಆಯೋಗ ರಚನೆ |
| 11 | 243J | ಪಂಚಾಯತ್ ಲೆಕ್ಕಪತ್ರಗಳ ಪರಿಶೋಧನೆ |
| 12 | 243K | ಪಂಚಾಯಿತಿಗಳ ಚುನಾವಣೆ |
| 13 | 243L | ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯ |
| 14 | 243M | ಈ ಭಾಗವು ಕೆಲವು ಪ್ರದೇಶಗಳಿಗೆ ಅನ್ವಯಿಸುವುದಿಲ್ಲ |
| 15 | 243N | ಕಾನೂನುಗಳು ಮತ್ತು ಪಂಚಾಯಿತಿಗಳನ್ನು ಮುಂದುವರಿಸುವುದು |
| 16 | 243O | ಚುನಾವಣಾ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳ ಹಸ್ತಕ್ಷೇಪಕ್ಕೆ ಪ್ರತಿಬಂಧ |

## b)74 ನೇ ಸಂವಿಧಾನ ತಿದ್ದುಪಡಿಯ ಅಂಶಗಳು

73 ನೇ ಸಂವಿಧಾನಾತ್ಮಕ ತಿದ್ದುಪಡಿಯು ಗ್ರಾಮೀಣ ಪ್ರದೇಶಗಳಲ್ಲಿನ ಸ್ಥಳೀಯ ಸರ್ಕಾರಗಳಿಗೆ ಸಂಬಂಧಿಸಿದಂತೆ, 74ನೇ ಸಂವಿಧಾನಾತ್ಮಕ ತಿದ್ದುಪಡಿ ನಗರ ಪ್ರದೇಶದ ಸ್ಥಳೀಯ ಸರ್ಕಾರಗಳಿಗೆ ಸಂಬಂಧಿಸಿದೆ. 74ನೇ ತಿದ್ದುಪಡಿಯಿಂದಾಗಿ ಪುರಸಭೆಗಳಿಗೆ ಸಂಬಂಧಿಸಿದ 243P ಯಿಂದ 243ZG ವಿಧಿಗಳನ್ನು ಒಳಗೊಂಡ 9Aನೇ ಹೊಸ ಭಾಗವನ್ನು ಮತ್ತು 18 ವಿಷಯಗಳನ್ನೊಳಗೊಂಡ 12 ಅನುಸೂಚಿಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು. 74ನೇ ತಿದ್ದುಪಡಿಯ 1992ರ ಕಾಯ್ದೆಯನ್ನು ನಗರ ಪಾಲಿಕೆ ಕಾಯ್ದೆ ಎಂದು ಪರಿಗಣಿಸಿ ಈ ಮಸೂದೆಯನ್ನು ಅಂತಿಮವಾಗಿ ರಾಷ್ಟ್ರಪತಿ ಅವರ ಸಹಿಯೊಂದಿಗೆ 1993ರ ಜೂನ್ 1 ರಂದು ಜಾರಿಗೆ ತರಲಾಯಿತು 74ನೇ ಸಂವಿಧಾನದ ತಿದ್ದುಪಡಿಯ ಮುಖ್ಯ ಉದ್ದೇಶ ನಗರ ಅಥವಾ ಪಟ್ಟಣಗಳ ಹಂತದಲ್ಲಿ ಸ್ಥಳೀಯ ಸರ್ಕಾರಗಳನ್ನು ಸ್ಥಾಪಿಸುವುದಾಗಿದೆ.

| ಕ್ರಮ ಸಂಖ್ಯೆ | ಅನುಚ್ಛೇದ | ವಿಷಯಾಂಶಗಳು (ಒಳಗೊಂಡಿರುವ ವಿಷಯ) |
|---|---|---|
| 1 | 243P | ಅರ್ಥ ವಿವರಣೆ |
| 2 | 243Q | ಮುನ್ಸಿಪಾಲಿಟಿಗಳ ವಿಧಗಳು |
| 3 | 243R | ಮುನ್ಸಿಪಾಲಿಟಿಯ ರಚನೆ |
| 4 | 243S | ವಾರ್ಡ್ಗಳ ಹಾಗೂ ಸಮಿತಿಗಳ ಸ್ವರೂಪ ಮತ್ತು ರಚನೆ |
| 5 | 243T | ಸ್ಥಾನಗಳ ಮೀಸಲಾತಿ |
| 6 | 243U | ಮುನ್ಸಿಪಾಲಿಟಿಗಳ ಅಧಿಕಾರ ಅವಧಿ |
| 7 | 243V | ಸದಸ್ಯರ ಅನರ್ಹತೆಗಳು |
| 8 | 243W | ಮುನ್ಸಿಪಾಲಿಟಿಗಳ ಅಧಿಕಾರಗಳು ಮತ್ತು ಕಾರ್ಯಗಳು |
| 9 | 243X | ಹಣಕಾಸಿನ ಮೂಲಗಳು |
| 10 | 243Y | ಹಣಕಾಸು ಆಯೋಗ |
| 11 | 243Z | ಲೆಕ್ಕಪತ್ರಗಳ ತಪಾಸಣೆ |
| 12 | 243ZA | ಮುನ್ಸಿಪಾಲಿಟಿಗಳ ಸದಸ್ಯರ ಚುನಾವಣೆ |
| 13 | 243ZB | ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯ |
| 14 | 243ZC | ಹೊರಟಾತಾದ ಪ್ರದೇಶಗಳು |
| 15 | 243ZD | ಜಿಲ್ಲಾ ಯೋಜನಾ ಸಮಿತಿ |
| 16 | 243ZE | ಮಹಾನಗರ ಪ್ರದೇಶದ ಯೋಜನಾ ಸಮಿತಿ |
